# ಸುವರ್ಣ ಜನನಿ

ನೇರ ದಿಟ್ಟ ಕನ್ನಡ ದಿನ ಪತ್ರಿಕೆ

Suvarn Janani

kannada Daily

ಡಾ.ಪ್ರವೀಣ ಪಾಟೀಲ ಸಾರಥ್ಯದಲ್ಲಿ.....

suvarnjananinews2022@gmail.com

ದೂರವಾಣಿ : 9742347569




ಸಂಪುಟ : 02 ಸಂಚಿಕೆ : 50 RNI .No. KARKAN/ 2022/82457 ದಿ : 08–10–2024 ಮಂಗಳವಾರ ಪುಟ : 4 ಬೆಲೆ : ರೂ : 5


## ‘ಅ. 18ರ ಸಚಿವ ಸಂಪುಟ ಸಭೆಯಲ್ಲಿ ಜಾತಿ ಗಣತಿ ವರದಿ ಮಂಡನೆ’

**ಬೆಂಗಳೂರು, ಅ.7– ‘ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ 2015ರಲ್ಲಿ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಜನಗಣತಿ) ವರದಿಯನ್ನು ಅ. 18ರಂದು ನಡೆಯಲಿರುವ ಸಚಿವ ಸಂಪುಟ ಸಭೆಯ ಮುಂದಿಟ್ಟು ಚರ್ಚೆ ನಡೆಸುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.**



ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಹಿಂದುಳಿದ ವರ್ಗಗಳ ಸಚಿವರು, ಶಾಸಕರು, ಮುಖಂಡರ ಜೊತೆ ಮುಖ್ಯಮಂತ್ರಿ ಸೋಮವಾರ ಸಭೆ ನಡೆಸಿದರು. ಸಭೆಯಲ್ಲಿ ಭಾಗವಹಿಸಿ ಹಿಂದುಳಿದ ವರ್ಗಗಳ ನಾಯಕರು ಪಕ್ಷಾತೀತವಾಗಿ ಜಾತಿಗಣತಿ ವರದಿಯ ಜಾರಿಗೆ ಒತ್ತಾಯಿಸಿದರು.

ಸಭೆಯ ಬಳಿಕ ಮಾತನಾಡಿದ ಸಿದ್ದರಾಮಯ್ಯ, ‘ಇದೇ 10ರಂದು ನಡೆಯುವ ಸಂಪುಟ ಸಭೆಗೆ ಈ ವರದಿಯನ್ನು ತರುವುದಿಲ್ಲ. 18ರ ಸಂಪುಟ ಸಭೆ ಮುಂದೆ ತರುತ್ತೇನೆ’ ಎಂದರು.

ವರದಿಗೆ ವಿರೋಧ ವ್ಯಕ್ತ ಆಗಿದೆಯಲ್ಲವೇ ಎಂಬ ಪ್ರಶ್ನೆಗೆ, ‘ಸಚಿವ ಸಂಪುಟ ಸಭೆ ಏನು ಹೇಳುತ್ತದೆಯೋ ಹಾಗೆ ಮಾಡುತ್ತೇವೆ. ಸಂಪುಟ ಸಭೆಯ ನಿರ್ಣಯದ ಪ್ರಕಾರ ತಿರ್ಮಾನ ಮಾಡುತ್ತೇವೆ’ ಎಂದರು.

‘ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ವರದಿ ಕೊಡಲು ಆಯೋಗ ಅಧ್ಯಕ್ಷರಾಗಿದ್ದ ಕಾಂತರಾಜು ಸಮಯ ನಿಗದಿ ಮಾಡಿದ್ದರು. ಆದರೆ, ಕುಮಾರಸ್ವಾಮಿ ವರದಿ ತೆಗೆದುಕೊಳ್ಳಲಿಲ್ಲ. ಈಗ ನಮ್ಮ ಅವಧಿಯಲ್ಲಿ ವರದಿ ಜಾ–ರಿಗೆ ಹಿಂದುಳಿದ ವರ್ಗಗಳ ನಾಯಕರು ಮನವಿ ಮಾಡಿದ್ದಾರೆ’ ಎಂದರು.

‘ಕಾಂತರಾಜು ಅವರ ಬಳಿಕ ಅಧ್ಯಕ್ಷರಾದ ಜಯಪ್ರಕಾಶ ಹೆಗ್ಡೆ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ವರದಿ ಜಾರಿಗೆ ಒತ್ತಾಯ ಇದೆ. ವರದಿ ಜಾರಿ ಮಾಡುವ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆಂದು ವಾರದ ಹಿಂದೆ ನಾನೇ ಹೇಳಿದ್ದೆ. ಹಿಂದುಳಿದ ವರ್ಗಗಳ ನಾಯಕರು ಇಂದು ಭೇಟಿ ಮಾಡಿ ಒತ್ತಾಯಿಸಿದ್ದಾರೆ’ ಎಂದೂ ಹೇಳಿದರು.

‘ಇದು ಹಿಂದುಳಿದ ವರ್ಗಗಳ ಸಮೀಕ್ಷೆ ಮಾತ್ರ ಅಲ್ಲ. ಏಳು ಕೋಟಿ ಜನರ ಸಮೀಕ್ಷೆ. ದೇಶದಲ್ಲಿ ಮೊದಲ ಬಾರಿಗೆ ಇಂಥ ಸಮೀಕ್ಷೆ ರಾಜ್ಯದಲ್ಲಿ ನಡೆದಿದೆ. ನಾನು ಈ ವರದಿ ನೋಡಿಲ್ಲ, ಓದಿಲ್ಲ’ ಎಂದೂ ಸಿದ್ದರಾಯಮ್ಮ ಹೇಳಿದರು.

## ಸಿದ್ದರಾಮಯ್ಯ ಜತೆ ಹೈಕಮಾಂಡ್ ಇದೆ: ಸಚಿವ ಜಮೀರ್



ವಿಜಯಪುರ, ಅ.7– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಕಾಂಗ್ರೆಸ್ ಹೈಕಮಾಂಡ್ ಇದೆ. ಹೀಗಾಗಿ ಯಾವುದೇ ಕಾರಣಕ್ಕೂ ಸಿದ್ದರಾಮಯ್ಯ ರಾಜೀನಾಮೆ ಪ್ರಶ್ನೆಯೇ ಇಲ್ಲ ಎಂದು ವಕ್ಫ್ ಸಚಿವ ಜಮೀರ್ ಅಹಮದ್ ಹೇಳಿದರು.

ವಿಜಯದಶಮಿ ಬಳಿಕ ಸಿಎಂ ರಾಜೀನಾಮೆ ನೀಡುತ್ತಾರೆ ಎಂಬ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿಕೆ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ನಗರದಲ್ಲಿ ಪ್ರತಿಕ್ರಿಯಿಸಿದ ಅವರು, ವಿಜಯೇಂದ್ರ ಯಾರು ವಿಜಯೇಂದ್ರ ಕಾಂಗ್ರೆಸ್ ಹೈಕಮಾಂಡಾ ಅವರು ಬಿಜೆಪಿ ರಾಜ್ಯಾಧ್ಯಕ್ಷ. ಅವರು ಹೇಳಿದ ಕೂಡಲೇ ರಾಜೀನಾಮೆ ಕೊಡೋಕೆ ಆಗುತ್ತಾ ಎಂದು ಮರು ಪ್ರಶ್ನಿಸಿದರು.

ನಮ್ಮ ಪಕ್ಷದ ಹೈಕಮಾಂಡ್ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ಸಿಎಂ ಸಿದ್ದರಾಮಯ್ಯ ಅವರೊಂದಿಗೆ ಇರುವ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲದೆ ವೇಣುಗೋಪಾಲ್, ರಣದೀಪ್ ಸುರ್ಜೇವಾಲಾ ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ ಹೈಕಮಾಂಡ್ ನಿಮ್ಮ ಜತೆ ಇದೆ ಎಂಬುವುದನ್ನು ಬೆಂಗಳೂರಿಗೆ ಬಂದು ತಿಳಿಸಿದ್ದಾರೆ ಎಂದರು.

ಕಾರ್ಯಕ್ರಮವೊಂದರಲ್ಲಿ ‘ಮುಂದಿನ ಸಿಎಂ ಸತೀಶ ಜಾರಕಿಹೊಳಿ’ ಎಂಬ ಘೋಷಣೆ ಕೇಳಿ ಬಂದ ಬಗ್ಗೆ ಪ್ರತಿಕ್ರಿಯಿಸಿದ ಜಮೀರ್, ಅಭಿಮಾನಿಗಳು ಕೂಗುತ್ತಾರೆ. ಹಾಗಂತ ಸಿಎಂ ಆಗಿ ಬಿಡುತ್ತಾರಾ ನನ್ನ ಅಭಿಮಾನಿಗಳು ಕೂಗುತ್ತಾರೆ. ನಾನು ಸಿಎಂ ಆಗುತ್ತೇನಾ ಎಂದರು.

## ಕುರ್ಚಿ ಕಾದಾಟ ಮಧ್ಯೆ ಸತೀಶ್ ಜಾರಕಿಹೊಳಿಯನ್ನು ಭೇಟಿಯಾದ ವಿಜಯೇಂದ್ರ



ಬೆಂಗಳೂರು, ಅ.7– ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ಸರ್ಕಾರಿ ನಿವಾಸಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರು ಕ್ಷೇತ್ರದ ಹಲವು ಮುಖಂಡರೊಂದಿಗೆ ಆಗಮಿಸಿ ಮಾತುಕತೆ ನಡೆಸಿದ್ದಾರೆ.

ಭೇಟಿ ಬಳಿಕ ಮಾತನಾಡಿದ ವಿಜಯೇಂದ್ರ, ನಮ್ಮ ಕ್ಷೇತ್ರದ ಮುಖಂಡರೊಂದಿಗೆ ಸಚಿವರನ್ನು ಭೇಟಿ ಮಾಡಿದ್ದೇವೆ. ನಮ್ಮ ಜಿಲ್ಲೆಯಲ್ಲಿ ಎರಡು ಹೈವೇ ಟೋಲ್‌ಗಳು ಬಂದಿವೆ. ಇದರಿಂದ ಮೂರು ಜಿಲ್ಲೆಗಳ ಜನರಿಗೆ ಸಮಸ್ಯೆ, ಬಡವರಿಗೆ ತೊಂದರೆ ಆಗುತ್ತಿದೆ. ಟೋಲ್ ಸ್ಥಳಾಂತರ ಮಾಡುವಂತೆ ಒತ್ತಾಯಿಸಿದ್ದೇವೆ. ಸಚಿವರು ಅಧಿಕಾರಿಗಳ ಸಭೆ ಕರೆದು ಚರ್ಚಿಸುತ್ತೇನೆ ಎಂದಿದ್ದಾರೆ ಎಂದು ತಿಳಿಸಿದರು.

ಈ ಭೇಟಿಯ ಸಮಯದಲ್ಲೇ ಜಾರಕಿಹೊಳಿ ಜೊತೆ ವಿಜಯೇಂದ್ರ ಪ್ರತ್ಯೇಕ ಮಾತುಕತೆ ನಡೆಸಿದ್ದಾರೆ. ಮನವಿ ಸ್ವೀಕಾರದ ಬಳಿಕ ನಿಮ್ಮ ಜೊತೆಗೆ ಮಾತುಕತೆ ನಡೆಸಬೇಕು ಬನ್ನಿ ಸರ್ ಎಂದು ವಿಜಯೇಂದ್ರ ಜಾರಕಿಹೊಳಿ ಅವರನ್ನು ಕರೆದಿದ್ದಾರೆ. ಬಿವೈವಿ ಕರೆದ ಹಿನ್ನೆಲೆಯಲ್ಲಿ ಸತೀಶ್ ಜಾರಕಿಹೊಳಿ ಪ್ರತ್ಯೇಕ ಮಾತುಕತೆ ನಡೆಸಿದ್ದಾರೆ.

## ಪಕ್ಷದ ವಿರುದ್ಧ ನಡೆದುಕೊಳ್ಳಲ್ಲ, ನಮಗ್ಯಾಕೆ ಭಯ: ಸತೀಶ್ ಜಾರಕಿಹೊಳಿ



ಬೆಂಗಳೂರು, ಅ.7– ಪಕ್ಷದ ವಿರುದ್ಧವಾಗಿ ನಾವೇನು ನಡೆದುಕೊಳ್ಳುವುದಿಲ್ಲ. ಹಾಗಾಗಿ ನಮಗ್ಯಾಕೆ ಭಯ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಬೆಂಗಳೂರಿನಲ್ಲಿ ಸೋಮವಾರ ಮಾತನಾಡಿದ ಅವರು, ದಲಿತ ಸಚಿವರಿಂದ ಪದೇ ಪದೇ ಭೇಟಿ ವಿಚಾರವಾಗಿ, ಈ ಹಿಂದೆ ಹೆಚ್ಚುವರಿ ಡಿಸಿಎಂ ವಿಚಾರವಾಗಿ ನಾವು ಬಹಿರಂಗವಾಗಿಯೇ ನಾವು ಹೇಳಿದ್ದೆವು. ಹೆಚ್ಚುವರಿ ಡಿಸಿಎಂ ಹುದ್ದೆಯಿಂದ ಪಕ್ಷಕ್ಕೆ ಅನುಕೂಲವಾಗುತ್ತೆ ಎಂದಿದ್ದೆವು.

ಸಿದ್ದರಾಮಯ್ಯನವರೇ ಸಿಎಂ ಆಗಿ ಇರ್ತಾರೆ. ಅವರೇ ಇದ್ದಾರೆ ಹಾಗೂ ಅವರೇ ಇರ್ತಾರೆ ಎಂದರು.

ಜೂನ್ ತಿಂಗಳಲ್ಲಿ ಸರ್ಕಾರ ಬೀಳುತ್ತದೆ ಎಂದು ಬಿಜೆಪಿಗರು ಹೇಳಿದ್ದರು. ಈಗಲೂ ಬಿಜೆಪಿಯವರು ಅದನ್ನೇ ಹೇಳ್ತಾರೆ. ಇದಕ್ಕೆ ನಾವು ಪ್ರತ್ಯುತ್ತರ ಕೊಡುತ್ತಾನೆ ಇದ್ದೇವೆ ಎಂದು ಹೇಳಿದರು. ಭಾನುವಾರ ನಾನು ಹಾಗೂ ಪರಮೇಶ್ವರ್ ತುಮಕೂರಿನಲ್ಲೂ ಭೇಟಿಯಾಗಿದ್ದೆವು. ಈ ಹಿಂದೆ ಸಚಿವ ಡಾ. ಎಚ್ ಸಿ ಮಹದೇವಪ್ಪ ಮನೆಯಲ್ಲೂ ಭೇಟಿಯಾಗಿದ್ದೆವು ಎಂದರು.

ಪದೇ ಪದೇ ದಲಿತ ಸಚಿವರ ಭೇಟಿಯಿಂದ ಹೈಕಮಾಂಡ್ ಗೆ ಮಾಹಿತಿ ಹೋಗುತ್ತೆ ಎಂಬ ಡಿಕೆಶಿ ಎಚ್ಚರಿಕೆಗೆ ಪ್ರತಿಕ್ರಿಯೆ ನೀಡಿ, ಈಗ ನಾವ್ಯಾಕೆ ಭಯಪಡೋಣ. ಪದೇ ಪದೇ ಅಂತಹ ಭೇಟಿ ನಡೆದಿದ್ದರೆ ಬೇಕಾದ್ರೆ ಮಾತನಾಡಲಿ .ಕೆಲವರು ಪ್ರಚಾರಕ್ಕೆ ಬರ್ತಾರೆ. ಕೆಲವರು ಪ್ರಚಾರಕ್ಕೆ ಬರಲ್ಲ. ಯಾರು ಪಕ್ಷ ನಿಷ್ಠೆ ಇರ್ತಾರೆ ಎಲ್ಲವನ್ನ ಹೈಕಮಾಂಡ್ ನೋಡುತ್ತದೆ ಎಂದರು.

ಇನ್ನು ಇದೇ ಸಂದರ್ಭದಲ್ಲಿ ಜಾತಿ ಜನಗಣತಿ ಜಾರಿ ವಿಚಾರವಾಗಿ ಮಾತನಾಡಿ, ಹಿರಿಯ ಕಾಂಗ್ರೆಸ್ ಮುಖಂಡ ಬಿ.ಕೆ ಹ–ರಿಪ್ರಸಾದ್ ಹೇಳಿಕೆಯನ್ನು ಸಮರ್ಥನೆ ಮಾಡಿಕೊಂಡರು.

ಜಾತಿ ಗಣತಿ ವರದಿ ಸಂಪುಟ ಸಭೆ ಹಾಗೂ ಸದನದಲ್ಲಿ ಚರ್ಚೆ ಆಗಬೇಕು. ಬಿ.ಕೆ ಹರಿಪ್ರಸಾದ್ ಹೇಳಿದ್ದು ಸರಿಯಾಗಿದೆ. ಜಾತಿ ಗಣತಿ ವರದಿ ಬಗ್ಗೆ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲೂ ಹೇಳಿದ್ದೆವು. ಜಾತಿಗಣತಿ ಬಗ್ಗೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರು ಹೇಳ್ತಾನೇ ಇದ್ದಾರೆ. ವರದಿ ಸದನದಲ್ಲಿ ಬಂದರೆ ಮುಕ್ತವಾಗಿ ಚರ್ಚಿಸಬಹುದು ಎಂದು ಅಭಿಪ್ರಾಯ ಪಟ್ಟರು.

ನಮ್ಮ ಸಂಖ್ಯೆ ಕಡಿಮೆ ಅನ್ನೋ ಕಾರಣಕ್ಕೆ ಕೆಲವರಿಂದ ಜಾತಿಗಣತಿ ವರದಿಗೆ ವಿರೋಧ ಇರಬಹುದು. ಇನ್ನೂ ಇದು ಸದನದಲ್ಲಿ ಚರ್ಚೆಗೆ ಬಂದಿಲ್ಲವಲ್ಲ. ಚರ್ಚೆಯಾಗಲಿ, ಬಳಿಕ ಅಂತಿಮ ರೂಪು ಕೊಡಬಹುದು ಎಂದರು.

ನಾನು ಇವತ್ತು ದಸರಾಗೆ ಹೋಗುತ್ತಿದ್ದೇನೆ. ಆದರೆ, ಯಾರನ್ನೂ ಜೊತೆಗೆ ಕರೆದುಕೊಂಡು ಹೋಗಲ್ಲ. ಮುಂದೆ ವಿದೇಶಕ್ಕೆ ಹೋಗುವ ಆಸೆಯಿತ್ತು. ವಿದೇಶಕ್ಕೆ ನಾನು ಹೋದ್ರೆ ಬೇರೆ ಚರ್ಚೆಯಾಗುತ್ತೆ. ಇನ್ನು ಕರೆದುಕೊಂಡು ಹೋದ್ರೆ ಸುಮ್ಮನಿರ್ತೀರಾ ಎಂದು ಪ್ರಶ್ನಿಸಿದರು.

## ಮನೆಗೆ ಕನ್ನ ಹಾಕಲು ಯತ್ನಿಸಿದ ಖದೀಮನ ಕಾಲಿಗೆ ಗುಂಡೇಟು



**ಹುಬ್ಬಳ್ಳಿ, ಅ.7– ಮನೆಗೆ ಕನ್ನ ಹಾಕಲು ಯತ್ನಿಸಿದ ಖದೀಮನ ಕಾಲಿಗೆ ಪೊಲೀಸರು ಗುಂಡು ಹಾರಿಸಿದ ಘಟನೆ ಹುಬ್ಬಳ್ಳಿಯಲ್ಲಿ ನಡೆದಿದೆ.**

ಗೋಕುಲ್ ಗ್ರಾಮದ ಮನೆಯೊಂದರ ಕಳ್ಳತನಕ್ಕೆ 5–6 ಜನರ ತಂಡ ಸಂಚು ಮಾಡಿತ್ತು. ಇದರಲ್ಲಿ ಆರೋಪಿ ಸೀತಾರಾಮ್ ಕಾಳೆಯನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ವಿಚಾರಣೆ ವೇಳೆ ಇನ್ನುಳಿದ ಆರೋಪಿಗಳನ್ನು ತೋರಿಸುತ್ತೆನೆಂದು ರೇವಡಿಹಾಳ ಮಾರ್ಗಕ್ಕೆ ಸೀತಾರಾಮ್ ಪೊಲೀಸರನ್ನು ಕರೆದುಕೊಂಡು ಹೋಗಿದ್ದ. ಈ ವೇಳೆ ಏಕಾಏಕಿ ಪೊಲೀಸರ ಮೇಲೆ ದಾಳಿ ಮಾಡಿ ಪರಾರಿಯಾಗಲು ಯತ್ನಿಸಿದ್ದಾನೆ.

## 6 ಜನರ ಮೇಲೆ ಎಫ್‌ಐಆರ್ ದಾಖಲು: ಹನಿಟ್ರ್ಯಾಪ್‌ಗೆ ಮುಮ್ತಾಜ್ ಅಲಿ ಬಲಿ



ಮಂಗಳೂರು, ಅ.7– ಮಾಜಿ ಶಾಸಕ ಮೊಯಿದ್ದೀನ್ ಬಾವ ಅವರ ತಮ್ಮ ಮುಮ್ತಾಜ್ ಅಲಿ ಅವರ ಮೃತದೇಹ ಪತ್ತೆಯಾಗಿದ್ದು, ಆರು ಜನರ ಮೇಲೆ ಎಫ್‌ಐಆರ್ ದಾಖಲಾಗಿದೆ. ಎಫ್‌ಐಆರ್ ದಾಖಲಾದ ಬೆನ್ನಲ್ಲೆ ಮುಮ್ತಾಜ್ ಅಲಿ ಅವರು ಹನಿಟ್ರ್ಯಾಪ್‌ಗೆ ಬಲಿಯಾಗಿದ್ರಾ ಎಂಬ ಪ್ರಶ್ನೆ ಎದ್ದಿದೆ.

ಮಾಜಿ ಶಾಸಕ ಮೊಯಿದ್ದೀನ್ ಬಾವಾ ತಮ್ಮ ಮುಮ್ತಾಜ್ ಅಲಿ ಅವರು ಭಾನುವಾರ ಬೆಳಗ್ಗೆಯಿಂದ ಕಾಣೆಯಾಗಿದ್ದರು. ನಾಪತ್ತೆಯಾಗಿದ್ದ ಹಿನ್ನೆಲೆ ಮುಮ್ತಾಜ್ ಆಲಿ ಸಹೋದರ ಹೈದರ್ ದೂರು ಕಾವೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಮಹಿಳೆಯನ್ನು ಬಳಸಿಕೊಂಡು ದುರುದ್ದೇಶದಿಂದ ಆತ್ಮಹತ್ಯೆ ಪ್ರಚೋದಿಸಿರುವುದಾಗಿ ದೂರು ನೀಡಿದ್ದಾರೆ.

ಸಹೋದರ ಮುಮ್ತಾಜ್ ಆಲಿ ಸಮಾಜದ ಗೌರವಾನ್ವಿತ ವ್ಯಕ್ತಿಯಾಗಿದ್ದಾರೆ. ಅವರ ಗೌರವ ಹಾಳು ಮಾಡಲು ಮಹಿಳೆಯ ಬಳಸಿಕೊಂಡು ಷಡ್ಯಂತ್ರ ಮಾಡಿದ್ದಾರೆ. ರೆಹಮತ್ ಅಕ್ರಮ ಸಂಬಂಧ ಇದೆ ಎಂದು ಸುಳ್ಳು ಪ್ರಚಾರದ ಬೆದರಿಕೆ ಹಾಕಿದ್ದಾರೆ. 2024ರ ಜುಲೈನಿಂದ ಈವರೆಗೆ 50 ಲಕ್ಷ ರೂ. ವಸೂಲಿ ಮಾಡಿದ್ದಾರೆ. 25 ಲಕ್ಷ ರೂ. ಹಣವನ್ನು ಚೆಕ್ ಮೂಲಕವೂ ಮಹಿಳೆ ಹಣ ಪಡೆದಿದ್ದಾಳೆ. ಇದನ್ನೂ ಓದಿ: ಮಕ್ಕಳ ಕಳ್ಳಿಯೆಂದು ಮಾನಸಿಕ ಅಸ್ವಸ್ಥೆಗೆ ಥಳಿತ: ಪೊಲೀಸರಿಂದ ಮಹಿಳೆಯ ರಕ್ಷಣೆ

ಸತ್ತಾರ್ ಎಂಬಾತ ಮುಮ್ತಾಜ್ ಆಲಿಯ ರಾಜಕೀಯ ವಿರೋಧಿಯಾಗಿದ್ದಾನೆ. ಜೀವ ಬೆದ–ರಿಕೆ ಜೊತೆಗೆ ಮುಮ್ತಾಜ್ ಅಲಿ ಕುಟುಂಬಕ್ಕೂ ಬೆದರಿಸಿದ್ದರು. ಹೀಗಾಗಿಯೇ ನಾನು ಅಲ್ಲಾಹುನ ಕಡೆಗೆ ಹೋಗುತ್ತಿದ್ದೇನೆ ಎಂದು ಆಡಿಯೋ ಮೆಸೇಜ್ ಹಾಕಿ ಸಹೋದರ ಮುಮ್ತಾಜ್ ಆಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಿದ್ದರು. ದೂರು ನೀಡಿದ ಬೆನ್ನಲ್ಲೆ ಮಹಿಳೆ ರೆಹಮತ್ ಜೊತೆ ಅಬ್ದುಲ್ ಸತ್ತಾರ್, ಶಫಿ, ಮುಸ್ತಾಫ, ಶೋಯೆಬ್ ಹಾಗೂ ಸಿರಾಜ್ ವಿರುದ್ಧ ಮಂಗಳೂ–ರಿನ ಕಾವೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಎಫ್‌ಐಆರ್ ದಾಖಲಾಗಿದ್ದ ಆರು ಜನರ ಪೈಕಿ ಮೂವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಮಹಿಳೆ ನಾಪತ್ತೆಯಾಗಿದ್ದು, ಕೇರಳದಲ್ಲಿ ಆಕೆಯ ಲೊಕೇಷನ್ ಪತ್ತೆಯಾಗಿದೆ. ಅಲ್ಲಿಗೆ ತೆರಳಿ ಮೊಬೈಲ್ ಸ್ವಿಚ್ ಆಫ್ ಮಾಡಿದ್ದಾಳೆ. ಮುಮ್ತಾಜ್ ಅಲಿ ನಾಪತ್ತೆ ಹಿಂದೆ ಆಕೆಯ ಕೈವಾಡ ಇದೆ ಎನ್ನುವುದು ತಿಳಿದುಬಂದಿದ್ದು, ತನಿಖೆ ನಡೆಯುತ್ತಿದೆ.

## ಪೋಕ್ಸೋ ಕೇಸ್: ಮುರುಘಾ ಶ್ರೀಗೆ ಜಾಮೀನು ಮಂಜೂರು

ಚಿತ್ರದುರ್ಗ: ಪೋಕ್ಸೋ ಪ್ರಕರಣದಲ್ಲಿ ಬಂಧನಕ್ಕೆ ಒಳಗಾದ ಮುರುಘಾಶ್ರೀಗೆ ಕೋರ್ಟ್ ಜಾಮೀನು ಮಂಜೂರು ಮಾಡಿದೆ

2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಸಾಕ್ಷ್ಯಗಳ ವಿಚಾರಣೆ ಬಹುತೇಕ ಪೂರ್ಣಗೊಂಡ ಹಿನ್ನೆಲೆಯಲ್ಲಿ ಚಿತ್ರದುರ್ಗದ ಮುರುಘಾಶ್ರೀ ಅವರಿಗೆ ಕೋರ್ಟ್ ಜಾಮೀನು ನೀಡಿದೆ.ಇದನ್ನೂ ಓದಿ: ರತನ್ ಟಾಟಾ ಆರೋಗ್ಯದಲ್ಲಿ ಏರುಪೇರು– ಆಸ್ಪತ್ರೆಗೆ ದಾಖಲು

ಪ್ರಕರಣದಲ್ಲಿ ಎ1 ಆರೋಪಿಯಾಗಿರುವ ಮುರುಘಾಶ್ರೀಗೆ ಈ ಹಿಂದೆ ಹೈಕೋರ್ಟ್ ಜಾಮೀನು ನೀಡಿತ್ತು. ಜಾಮೀನು ಪ್ರಶ್ನಿಸಿ ಸುಪ್ರೀಂನಲ್ಲಿ ಪ್ರಶ್ನೆ ಮಾಡಲಾಗಿತ್ತು. ಆರೋಪಿ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇರುವುದರಿಂದ ಜಾಮೀನು ರದ್ದುಗೊಳಿಸಬೇಕೆಂದು ಮನವಿ ಮಾಡಲಾಗಿತ್ತು.

ಈ ಅರ್ಜಿಯನ್ನು ಪುರಸ್ಕರಿಸಿದ್ದ ಸುಪ್ರೀಂ ಕೋರ್ಟ್ ಸಾಕ್ಷ್ಯಗಳ ವಿಚಾರಣೆ ಪೂರ್ಣಗೊಳಿಸಬೇಕು. ಅಷ್ಟೇ ಅಲ್ಲದೇ ಸಾಕ್ಷ್ಯಗಳ ವಿಚಾರಣೆ ಪೂರ್ಣಗೊಳಿಸುವವರೆಗೆ ಬಂಧನದಲ್ಲಿಡುವಂತೆ ಆದೇಶಿಸಿತ್ತು. ಇದೀಗ ಸಾಕ್ಷ್ಯಗಳ ವಿಚಾರಣೆ ಪೂರ್ಣಗೊಂಡ ಹಿನ್ನೆಲೆಯಲ್ಲಿ ಕೋರ್ಟ್ ಇಂದೇ ಬಿಡುಗಡೆಗೆ ಆದೇಶ ಹೊರಡಿಸಿದೆ.

## ದಸರಾ ಕ್ರೀಡಾಕೂಟ: ಆರ್ಚರಿಯಲ್ಲಿ ಪದಕ

ಸುರಪುರ, ಅ.7– ಮೈಸೂರು ದಸರಾ ಕ್ರೀಡಾಕೂಟದಲ್ಲಿ ಕಲಬುರಗಿ ವಿಭಾಗದಿಂದ ಸ್ಪರ್ಧಿಸಿದ್ದ ತಾಲ್ಲೂಕಿನ ದೇವಪುರದ ಏಕಲವ್ಯ ಕ್ರೀಡಾ ಸಂಸ್ಥೆಯ ಕ್ರೀಡಾಪಟುಗಳು, ಆರ್ಚರಿ(ಬಿಲ್ಲುಗಾರಿಕೆ)ಯಲ್ಲಿ 1 ಚಿನ್ನ, 3 ಬೆಳ್ಳಿ, 4 ಕಂಚು ಸೇರಿ ಒಟ್ಟು 8 ಪದಕಗಳನ್ನು ಗೆದ್ದು, ಸಾಧನೆ ಮಾಡಿದ್ದಾರೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ದಸರಾ ಸಿಎಂ ಕಪ್ 2024–25ನೇ ಸಾಲಿನ ರಾಜ್ಯಮಟ್ಟದ ಆರ್ಚರಿ ಕ್ರೀಡಾಕೂಟದ ಪುರುಷರ ವಿಭಾಗದಲ್ಲಿ ರಘು ಅವರು 30 ಮೀ.ನಲ್ಲಿ ಪ್ರಥಮ, 50 ಮೀ.ನಲ್ಲಿ ತೃತೀಯ ಸ್ಥಾನ ಹಾಗೂ ಒಲಿಂಪಿಕ್ಸ್ ರೌಂಡ್ಸ್‌ನಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡರು. ಮೌನೇಶಕುಮಾರ 30 ಮೀ. ಮತ್ತು 50 ಮೀ. ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಗಳಿಸಿದರೆ, ಮಹಿಳಾ ವಿಭಾಗದಲ್ಲಿ ರೇಣುಕಾ 30 ಮೀ. ಮತ್ತು 50 ಮೀ. ಎರಡು ವಿಭಾಗದಲ್ಲಿ ತೃತೀಯ ಸ್ಥಾನ, ದೇವಮ್ಮ ಎಲಿಮಿನೇಷನ್ ಸುತ್ತಿನಲ್ಲಿ ಕಂಚಿನ ಪದಕ ಗೆದ್ದುಕೊಂಡರು.

## ವಿದ್ಯಾರ್ಥಿ ಮೇಲೆ ಹಲ್ಲೆ ನಡೆಸಿದ ಕೋಚಿಂಗ್ ಸೆಂಟರ್ನ ವಾರ್ಡನ್: ಆರೋಪ

**ವಿಜಯಪುರ, ಅ.7– ಗಣಿತ ವಿಷಯದ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದ ಎಂಬ ಕಾರಣದಿಂದ ವಿಜಯಪುರ ನಗರದ ಕೋಚಿಂಗ್ ಸೆಂಟರ್ನ ವಾರ್ಡನ್ ವಿದ್ಯಾರ್ಥಿ ಮೇಲೆ ತೀವ್ರವಾಗಿ ಹಲ್ಲೆ ನಡೆಸಿದ ಘಟನೆ ನಡೆದಿದೆ. ವಿಜಯಪುರ ತಾಲೂಕಿನ ಇಟ್ಟಂಗಿಹಾಳ ಗ್ರಾಮದ ಹೊರ ಭಾಗದಲ್ಲಿರೋ ಎಕ್ಸಲೆಂಟ್ ಕೋಚಿಂಗ್ ಸೆಂಟರ್ ನಲ್ಲಿ ಘಟನೆ ನಡೆದಿದೆ.**




ಕೋಚಿಂಗ್ ಪಡೆಯುತ್ತಿದ್ದ ದಾವಣಗೆರೆ ಮೂಲದ ವಿದ್ಯಾರ್ಥಿ ಮೇಲೆ ವಾರ್ಡನ್ ತೀವ್ರವಾಗಿ ಹಲ್ಲೆ ಮಾಡಿದ್ದಾರೆ ಎನ್ನಲಾಗಿದೆ. ವಿದ್ಯಾರ್ಥಿ ಗಣಿತ ವಿಷಯದ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದಿರೋ ಕಾರಣ ವಿದ್ಯಾರ್ಥಿಯ ತೊಡೆಭಾಗ ಹಾಗೂ ಬೆನ್ನಿನ ಮೇಲೆ ವಾರ್ಡನ್ ಹಲ್ಲೆ ಮಾಡಿದ್ದಾನೆ. ಹಲ್ಲೆಯಿಂದಾಗಿ ವಿದ್ಯಾರ್ಥಿಗೆ ಕುಳಿತುಕೊಳ್ಳಲೂ ಆಗುತ್ತಿಲ್ಲ. ಈ ಕೋಚಿಂಗ್ ಸೆಂಟರ್ ನಲ್ಲಿ ಈ ಹಿಂದೆಯೂ ಹಲವು ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡಿದ್ದ ಆರೋಪ ಕೇಳಿ ಬಂದಿದೆ.

ಇನ್ನು ಕೋಚಿಂಗ್ ಸೆಂಟರ್ ಮುಖ್ಯಸ್ಥ ಬಸವರಾಜ ಕವಲಗಿ ವಿದ್ಯಾರ್ಥಿ ಮೇಲೆ ವಾರ್ಡನ್ ಹಲ್ಲೆ ಮಾಡಿರೋ ವಿಚಾರ ಗೊತ್ತಿಲ್ಲವೆಂದಿದ್ದಾರೆ. ಘಟನೆ ಕಾರಣ ವಿದ್ಯಾರ್ಥಿಯನ್ನು ಆತನ ಪೋಷಕರು ದಾವಣಗೆರೆಗೆ ವಾಪಸ್ ಕರೆದುಕೊಂಡು ಹೋಗಿದ್ದು ಅಲ್ಲಿಯೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದಾರೆ. ಈ ಘಟನೆ ಕುರಿತು ದಾವಣಗೆರೆಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಲು ತೀರ್ಮಾಣ ಮಾಡಿದ್ದಾಗಿ ಮಾಹಿತಿ ನೀಡಿದ್ದಾರೆ.

***

# ದಂತ ವೈದ್ಯಕೀಯ ಕಾಲೇಜಿನಲ್ಲಿ ಪದವಿ ಪ್ರದಾನ ಸಮಾರಂಭ



ಬಾಗಲಕೋಟೆ, ಅ.7– 'ಪ್ರತಿಯೊಬ್ಬ ರೋಗಿಯನ್ನು ಸಮಾನ ಮನೋಭಾವದಿಂದ ನೋಡಿ. ಹಣ ಗಳಿಕೆಯೇ ವೈದ್ಯವೃತ್ತಿಯ ಮುಖ್ಯ ಧ್ಯೇಯವಲ್ಲ' ಎಂದು ನವಿಮುಂಬೈನ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ ಸೈನ್ಸ್‌ನ ವಿಶ್ರಾಂತ ಸಂಶೋಧನಾ ನಿರ್ದೇಶಕಿ ಡಾ.ಸಬಿತಾ ಎಂ. ರಾಮ್ ಹೇಳಿದರು.

ನಗರದ ಎಸ್.ನಿಜಲಿಂಗಪ್ಪ ವೈದ್ಯಕೀಯ ಕಾಲೇಜಿನಲ್ಲಿ ನಡೆದ ದಂತ ವೈದ್ಯಕೀಯ ವಿದ್ಯಾರ್ಥಿಗಳ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಕಠಿಣ ಪರಿಶ್ರಮದಿಂದ ನೀವು ಪದವೀಧರರಾಗಿರುವಿರಿ. ನಿಮ್ಮ ಬದುಕಿನಲ್ಲಿ ಹೊಸ ಅಧ್ಯಾಯ ಆರಂಭವಾಗಿದೆ. ವೃತ್ತಿಯಲ್ಲಿ ಎದುರಾಗುವ ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ' ಎಂದರು.

'ವೀರಣ್ಣ ಚರಂತಿಮಠ ಅತ್ಯುತ್ತಮ ದಂತ ಕಾಲೇಜು ಸ್ಥಾಪಿಸಿದ್ದಾರೆ. ನೀವು ವಿದ್ಯೆ ಪಡೆದ ಸಂಸ್ಥೆ ಮರೆಯಬೇಡಿ. ರೋಗಿಗಳಿಗೆ ಅತ್ಯುತ್ತಮ ಚಿಕಿತ್ಸೆ ನೀಡುವ ಮೂಲಕ ಸಂಸ್ಥೆಗೆ ಗೌರವ ತಂದುಕೊಡಿ' ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಬಿ.ವಿ.ವಿ.ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ ಮಾತನಾಡಿ, 'ಭವಿಷ್ಯದಲ್ಲಿ ಸವಾಲುಗಳನ್ನು ಎದುರಿಸಿ ವೃತ್ತಿಯಲ್ಲಿ ಯಶಸ್ಸು ಸಾಧಿಸಲು ಸಹಯೋಗ, ಸಂವಹನ ಅಗತ್ಯವಾಗಿವೆ. ವಿದ್ಯಾರ್ಥಿಗಳ ಅಧ್ಯಯನಕ್ಕೆ ಅನುಕೂಲವಾಗಲಿ ಎಂದು ಅತ್ಯಾಧುನಿಕ ಯಂತ್ರೋಪಕರಣಗಳನ್ನು ಖರೀದಿಸಲಾಗಿದೆ' ಎಂದರು.

90 ದಂತವೈದ್ಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಪ್ರಾಚಾರ್ಯ ಡಾ.ಶ್ರೀನಿವಾಸ ವನಕಿ ಪ್ರಾಸ್ತಾವಿಕ ಮಾತನಾಡಿದರು. ಡಾ.ಆರತಿ ಕೊರೆಗೋಳ ಪ್ರತಿಜ್ಞಾವಿಧಿ ಬೋಧಿಸಿದರು. ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ ಇದ್ದರು.

# ಹೊಡೆದಾಳುವ ನೀತಿ ವಿರುದ್ಧ ಧ್ವನಿ ಎತ್ತಿ: ಯುವ ವಾಗ್ಮಿ ಹಾರಿಕಾ ಮಂಜುನಾಥ ಹೇಳಿಕೆ



ಮಹಾಲಿಂಗಪುರ, ಅ.7– 'ಜಾತಿ ಮತ ಭೇದವೆಂಬ ವಿಷಬೀಜ ಬಿತ್ತಿ ಹಿಂದೂ ಧರ್ಮ ಹೊಡೆದಾಳುವ ನೀತಿಯ ವಿರುದ್ಧ ಧ್ವನಿ ಎತ್ತಿ ಹಿಂದೂ ಧರ್ಮವನ್ನು ಉಳಿಸುವ ಹಾಗೂ ಒಗ್ಗೂಡಿಸುವ ಅಗತ್ಯವಿದೆ' ಎಂದು ಬೆಂಗಳೂರಿನ ಯುವವಾಗ್ಮಿ ಹಾರಿಕಾ ಮಂಜುನಾಥ ಹೇಳಿದರು.

ಪಟ್ಟಣದ ಬನಶಂಕರಿದೇವಿ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ ಶುಕ್ರವಾರ ರಾತ್ರಿ ದಸರಾ ಸಾಂಸ್ಕೃತಿಕ ಉತ್ಸವದಲ್ಲಿ 'ಧರ್ಮ ಸಂಸ್ಕೃತಿ' ಕುರಿತು ದಿಕ್ಸೂಚಿ ಭಾಷಣ ಮಾಡಿದರು.

'ಬ್ರಾಹ್ಮಣ, ಲಿಂಗಾಯತ, ಎಸ್‌ಸಿ, ಎಸ್‌ಟಿ, ನಾಯಕ ಎಂದು ಬೇರೆ ಬೇರೆ ಜಾತಿಗಳ ಹೆಸರು ಹೇಳುವುದು ಬಿಟ್ಟು ಒಂದೇ ಎಂಬ ಭಾವ ಬರಬೇಕು. ಶ್ರೀಕೃಷ್ಣ ಪರಮಾತ್ಮನ ಮಹಾಭಾರತದ ಭಗವದ್ಗೀತೆಯನ್ನು ಕೈಯಲ್ಲಿ ಹಿಡಿದು ಹಿಂದೂ ಧರ್ಮದ ರಕ್ಷಣೆ ಮಾಡಲು ಸಾಧ್ಯವಿದೆ. ಹಿಂದೂ ಧರ್ಮದಲ್ಲಿ ಇರುವ ಜಾತಿ ಸಂಕೋಲೆ ಕಿತ್ತೆಸೆದು ಹಿಂದೂಗಳು ಸಂಘಟಿತರಾಗಬೇಕು' ಎಂದರು.

ಇದಕ್ಕೂ ಮುನ್ನ ಪ್ರವಚನಕಾರ ಬೆಂಗಳೂರಿನ ಅನ್ನದಾನಿ ಸ್ವಾಮೀಜಿ 'ಶ್ರೀದೇವಿ ಪುರಾಣ' ಪ್ರವಚನ ನೀಡಿದರು. ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶ್ರೀಕಾಂತ ನಾಯಿಕ ಗವಾಯಿಗಳಾಗಿ, ಹಣಮಂತ ಅಂಕದ ತಬಲಾ ಸಾಥ್ ನೀಡಿದರು. ಕುರುಹಿನಶೆಟ್ಟಿ, ಮಡಿವಾಳ, ಭಗೀರಥ, ಜೈನ ಸಮಾಜದ ಮುಖಂಡರು ಶ್ರೀಗಳನ್ನು ಸನ್ಮಾನಿಸಿದರು. ಪ್ರಸಾದ ದಾನಿಗಳಾದ ಶಂಕರ ಅಂಬಿ ಹಾಗೂ ಸಂಜಯ ಅಂಬಿ ದಂಪತಿಯನ್ನು ಸನ್ಮಾನಿಸಲಾಯಿತು. ನಂತರದಲ್ಲಿ ವಿಜಯಪುರದ ಸಾಕ್ಷಿ ಹಿರೇಮಠ ಗಾಯನ ಪ್ರಸ್ತುತಪಡಿಸಿದರು. ಗುರುಕೃಪೆ ಅಗತ್ಯ; ಇಟಕನ್ನವರ

ಮಹಾಲಿಂಗಪುರ: 'ನಾವು ಮಾಡುವ ಎಲ್ಲ ಕಾರ್ಯಕ್ಕೂ ಗುರುಕೃಪೆ ಅಗತ್ಯವಿದೆ' ಎಂದು ಶರಣ ಮಹೇಶ ಇಟಕನ್ನವರ ಹೇಳಿದರು.

ಪಟ್ಟಣದ ನೀಲಕಂಠೇಶ್ವರ ಮಠದಲ್ಲಿ ನವರಾತ್ರಿ ಉತ್ಸವ ಅಂಗವಾಗಿ ಶುಕ್ರವಾರ ರಾತ್ರಿ ನಡೆದ ಶ್ರೀದೇವಿ ಪುರಾಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ರನ್ನ ಬೆಳಗಲಿಯ ಶಂಭುಲಿಂಗ ಆಶ್ರಮದ ಕಾಶಿಬಾಯಿ ಪುರಾಣಿಕ ಪ್ರವಚನ ನೀಡಿದರು. ಶಿವಶಂಕರ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಜಯರಾಮಶೆಟ್ಟಿ ಮಾತನಾಡಿದರು. ಮಾಳಿ, ಜಂಗಮ ಹಾಗೂ ಹಾಲುಮತ ಸಮಾಜದ ಮುಖಂಡರು ಶ್ರೀಗಳನ್ನು ಸನ್ಮಾನಿಸಿದರು. ಕುರುಹಿನಶೆಟ್ಟಿ ಯುವವೇದಿಕೆ, ಟ್ರಸ್ಟ್ ಕಮಿಟಿ ಹಾಗೂ ಕುರುಹಿನಶೆಟ್ಟಿ ಸಮಾಜದ ಮುಖಂಡರು ಇದ್ದರು. 'ದೇವಿ ಆರಾಧನೆ ಅಗತ್ಯ'

ಮಹಾಲಿಂಗಪುರ: ಪಟ್ಟಣದ ಬಸವನಗರದಲ್ಲಿ ಹಮ್ಮಿಕೊಂಡಿರುವ ನವರಾತ್ರಿ ಉತ್ಸವದ ವೇದಿಕೆಗೆ ಶಾಸಕ ಸಿದ್ದು ಸವದಿ ಭೇಟಿ ನೀಡಿ ದೇವಿಯ ದರ್ಶನ ಪಡೆದರು.

ನಂತರ ಮಾತನಾಡಿದ ಅವರು, 'ಸಕಲ ಪಾಪಗಳ ಪರಿಹಾರ ಹಾಗೂ ಮಾನವ ಸಂಕುಲದ ಸಮೃದ್ಧಿಗಾಗಿ ದೇವಿ ಆರಾಧನೆ ಅಗತ್ಯ' ಎಂದರು.

ಸುರೇಶ ಅಕ್ಕಿವಾಟ, ಶಿವರಾಜ ಕಡಬಲ್ಲವರ, ಬಸವರಾಜ ಗಿರಿಸಾಗರ, ಮಹಾಲಿಂಗಪ್ಪ ಕುಳ್ಳೊಳ್ಳಿ, ಅಶೋಕಗೌಡ ಪಾಟೀಲ, ರವಿ ಗಿರಿಸಾಗರ, ಬಸಯ್ಯ ಭಟ್ಟಿಮಠ, ಬಸಯ್ಯ ಸಾವಳಗಿಮಠ, ಮಹಾಲಿಂಗಪ್ಪ ಕಂಠಿ, ಹಣಮಂತ ಕಾಂಬಳೇಕರ ಇತರರು ಇದ್ದರು. ನಂತರ ರಾತ್ರಿ ಮಹಿಳೆಯರಿಂದ ದಾಂಡಿಯಾ ನೃತ್ಯ ಕಾರ್ಯಕ್ರಮ ನಡೆಯಿತು.

# ಉದ್ಯೋಗ ನೀಡಲು ಶಿಕ್ಷಣ ಸಂಸ್ಥೆ ಶ್ರಮಿಸಲಿ




ತೇರದಾಳ, ಅ.7– ಶಿಕ್ಷಣ ಸಂಸ್ಥೆಗಳು ಮೌಲ್ಯಯುತ ಶಿಕ್ಷಣ ನೀಡಿ, ಪದವಿ ಪಡೆದು ಹೊರಬರುವಾಗ ಉದ್ಯೋಗ ದೊರಕಿಸಿಕೊಡುವ ನಿಟ್ಟಿನಲ್ಲಿ ಶ್ರಮಿಸಲಿ. ಆ ನಿಟ್ಟಿನಲ್ಲಿ ನಮ್ಮ ಸಂಸ್ಥೆ ಹೆಜ್ಜೆಯನ್ನಿಟ್ಟು ಮುನ್ನಡೆದಿದೆ' ಎಂದು ಎಸ್‌ಡಿ–ಎಂಸಿ ಟ್ರಸ್ಟ್ ಸಂಸ್ಥಾಪಕ ಚೇರ್ಮನ್ ಎಂ.ಎಸ್. ದಾನಿಗೊಂಡ ಹೇಳಿದರು.

ಪಟ್ಟಣದ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆ ಹಾಗೂ ಬಾಗಲಕೋಟೆ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ದಾನಿಗೊಂಡ ವಾಣಿಜ್ಯ ಮಹಾವಿದ್ಯಾಲಯದಲ್ಲಿ ನಡೆದ ಉದ್ಯೋಗ ಮೇಳದ ಉದ್ಘಾಟನೆಯ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಪಡೆದ ಪ್ರತಿಭಾವಂತ ಯುವಕರು ಉದ್ಯೋಗಕ್ಕಾಗಿ ದೂರದ ಪಟ್ಟಣಕ್ಕೆ ಅಲೆದಾಡುವುದನ್ನು ತಪ್ಪಿಸಲು ಪ್ರಥಮ ಬಾರಿಗೆ ಇಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ' ಎಂದರು.

ಜಮಖಂಡಿಯ ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಸಚಿವ ದಯಾನಂದ ಸಾವಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, 'ಉತ್ತಮ ಶಿಕ್ಷಣ ಪಡೆದ ಪ್ರತಿಭಾವಂತರಿಗೆ ಉತ್ತಮ ಅವಕಾಶಗಳಿವೆ. ಸಂಸ್ಥೆಯು ಆಯೋಜಿಸಿದ ಇಂಥ ಮೇಳಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು' ಎಂದು ತಿಳಿಸಿದರು.

ಬೆಳಗಾವಿ ಪ್ರೊಫಿಸಿಯಂಟ್ ಮೈಂಡ್ಸ್ ಸಂಸ್ಥಾಪಕ ನಿರ್ದೇಶಕ ಸುಹಾಸ ರಜಪೂತ ಮಾತನಾಡಿ, ಪ್ರತಿಭಾವಂತ ಅಭ್ಯರ್ಥಿಗಳನ್ನು ಮಾತ್ರ ಉತ್ತಮ ಕಂಪನಿಗಳು ಆಯ್ಕೆ ಮಾಡಿಕೊಳ್ಳುತ್ತವೆ' ಎಂದರು.

ಲಕ್ಷ್ಮಿ ಹೊಸೂರ, ವಾಣಿಶ್ರೀ ಕಂಚಗೊಂಡ, ರೂಪಾ ಕರಿಗಾರ ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಸಂತೋಷ ಕೃಷ್ಣಾಪುರೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಕಾಶ ಮಾಳಿ, ವಿ.ಎಸ್. ನೇಗಿನಾಳ, ಮಾಧುರಿ ವಥಾಳೆ ಕಾರ್ಯಕ್ರಮ ನಿರ್ವಹಿಸಿದರು.

# 'ಆನಂದದ ಆರಾಧನೆ ನಿಜವಾದ ಜೀವನ'




**ಲೋಕಾಪುರ, ಅ.7– 'ಆನಂದದ ಆರಾಧನೆ ನಿಜವಾದ ಜೀವನ' ಎಂದು ಕೊಪ್ಪಳ ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಹೇಳಿದರು.**

ಸಮೀಪದ ಚಿಚಖಂಡಿ ಬಿ.ಕೆ.ಗ್ರಾಮದಲ್ಲಿ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನಿಸರ್ಗ ಆನಂದ ಭರಿತವಾಗಿದೆ. ಮನುಷ್ಯ ಮಾತ್ರ ಒತ್ತಡದ ಜೀವನದಲ್ಲಿ ಆನಂದವಾಗಿಲ್ಲ,ನನ್ನದು ಎಂಬ ಅಹಂಕಾರದಿಂದ ಮನುಷ್ಯ ದೂರವಿರಬೇಕು. ಮನುಷ್ಯನಲ್ಲಿ ನನ್ನದಲ್ಲ, ಇದು ದೇವರದು ಎಂಬ ಭಾವನೆ ಇರಬೇಕು. ಪುಣ್ಯ ಮಾತ್ರ ನಮ್ಮನ್ನು ರಕ್ಷಿಸುತ್ತದೆ ಒಳ್ಳೆಯ ವಿಚಾರ, ಆಚಾರದಿಂದ ಮನುಷ್ಯ ಜೀವನದಲ್ಲಿ ಆನಂದವಾಗಿರಲು ಸಾಧ್ಯ' ಎಂದರು.

ಜ್ಞಾನಮಯಾನಂದ ಸ್ವಾಮೀಜಿ, ಕೃಷ್ಣಾನಂದ ಶಾಸ್ತ್ರಿ, ಶಿವಕುಮಾರ ಹಿರೇಮಠ, ಸಿದ್ರಾಮಯ್ಯ ಹಿರೇಮಠ ವೇದಿಕೆಮೇಲಿದ್ದರು.

# ಜಿಲ್ಲಾಮಟ್ಟದ ವಾಲಿಬಾಲ್ ಪಂದ್ಯಾವಳಿ



ದೇವರಹಿಪ್ಪರಗಿ, ಅ.7– 'ಸದೃಢ ದೇಹ, ಶಾಂತಿ, ಮನಸ್ಸು ನೆಲೆಗೊಳ್ಳಲು ಕ್ರೀಡೆಗಳು ಮಕ್ಕಳಿಗೆ ಅಗತ್ಯ' ಎಂದು ಶಾಸಕ ರಾಜುಗೌಡ ಪಾಟೀಲ (ಕುದರಿ ಸಾಲವಾಡಗಿ) ಹೇಳಿದರು.

ತಾಲ್ಲೂಕಿನ ಮಣೂರ ಗ್ರಾಮದ ಕೆಎಸ್‌ಎಲ್‌ಎ ಪ್ರೌಢಶಾಲೆಯಲ್ಲಿ ನಡೆದ ಜಿಲ್ಲಾಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ವಾಲಿಬಾಲ್ ಪಂದ್ಯಾವಳಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕ್ರೀಡಾ ಚಟುವಟಿಕೆಗಳಿಂದ ನಮಗೆ ಆರೋಗ್ಯ ಭಾಗ್ಯ ದೊರೆಯಬಲ್ಲದು. ಆದ್ದರಿಂದ ವಿದ್ಯಾರ್ಥಿಗಳು ಪಠ್ಯದ ಜೊತೆ ಕ್ರೀಡೆಗಳತ್ತಲೂ ಗಮನ ಹರಿಸಬೇಕು' ಎಂದು ಸಲಹೆ ನೀಡಿದರು. ಸಾನ್ನಿಧ್ಯ ವಹಿಸಿದ್ದ ದೇವೂರ ಹಿರೇಮಠದ ಮರುಳಾರಾಧ್ಯ ಶ್ರೀ ಮಾತನಾಡಿ, 'ಕ್ರೀಡೆಗಳಲ್ಲಿ ಸೋಲು, ಗೆಲವು ಸಾಮಾನ್ಯ. ಆದರೆ ಅವುಗಳಲ್ಲಿ ಪಾಲ್ಗೊಳ್ಳುವಿಕೆ ಅತಿ ಮುಖ್ಯ' ಎಂದರು.

ಪಂದ್ಯಾವಳಿಯಲ್ಲಿ ಮಣೂರ ಗ್ರಾಮದ ಕೆ–ಎಸ್‌ಎಲ್‌ಎ ಪ್ರೌಢಶಾಲೆ ಬಾಲಕರು ಹಾಗೂ ಇಂಡಿ ತಾಲ್ಲೂಕಿನ ಲಚ್ಯಾಣದ ಜಿಎಚ್‌ಎಸ್ ಬಾಲಕಿಂ–ಯರು ಪ್ರಥಮ ಸ್ಥಾನ ಪಡೆದರೆ, ಪ್ರಾಥಮಿಕ ಶಾಲಾ ಮಟ್ಟದಲ್ಲಿ ಇಂಡಿ ಎಂಡಿಆರ್‌ಎಸ್ ಬಾಲಕರು ಹಾಗೂ ಆಲಮಟ್ಟಿ ಡ್ಯಾಸೈಟಿನ್ ಶಾರದಾ ಕನ್ನಡ ಪ್ರಾಥಮಿಕ ಶಾಲೆಯ ಬಾಲಕಿಯರು ಪ್ರಥಮ ಸ್ಥಾನ ಪಡೆದು ವಿಜೇತರಾದರು. ಸಿಂದಗಿ ಕ್ಷೇತ್ರಶಿಕ್ಷಣಾಧಿಕಾರಿ ಎಂ.ಬಿ. ಯಡ್ರಾಮಿ, ವೆಂಕಟೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಎಲ್.ಆರ್. ಅಂಗಡಿ, ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿ ನಾಮದೇವ ಚವ್ಹಾಣ, ಮುಖ್ಯಶಿಕ್ಷಕ ಎಸ್.ಸಿ. ಕಿತ್ತೂರ, ದೈಹಿಕ ಶಿಕ್ಷಣ ಶಿಕ್ಷಕ ಎಸ್.ಡಿ.ಆನೆಗುಂದಿ, ಶಿಕ್ಷಕರಾದ ಪ್ರಕಾಶ ನಾಯಿಕ, ಎಂ.ಜಿ. ಸಜ್ಜನ, ಆರ್.ಯು. ಜಾಧವ, ಡಿ.ಜಿ.ಜಾಡರ ಇದ್ದರು.

# ಕ್ರೀಡಾ ಮನೋಭಾವ ಬೆಳೆಸಿಕೊಳ್ಳಿ: ಶ್ರೀ

ತಾಳಿಕೋಟೆ, ಅ.7– ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ ಭಾಗವಹಿಸುವಿಕೆ ಮುಖ್ಯವಾಗಿದೆ. ಕ್ರೀಡಾ ಮನೋಭಾವದೊಂದಿಗೆ ಆಟವಾಡಲು ಪ್ರಯತ್ನಿಸಿ ಎಂದು ಕೆಸರಟ್ಟಿಯ ಬಾಲಶಿವಯೋಗಿ ಸೋಮಲಿಂಗ ಶ್ರೀ ಹೇಳಿದರು.

ಪಟ್ಟಣದ ಎಸ್.ಕೆ. ಕಾಲೇಜು ಮೈದಾನದಲ್ಲಿ ಚೇತಕ್ ಸ್ನೇಹಿತರ ಬಳಗ ಹಾಗೂ ರಜಪೂತ ಯುವಕ ಮಂಡಳಿ ಸಹಯೋಗದಲ್ಲಿ ರಜಪೂತ ಸಮಾಜದ 25ನೇ ವರ್ಷದ ದಸರಾ ಹಬ್ಬದ ರಜತ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಚೇತಕ್ ಪ್ರೀಮಿಯರ್ ಲೀಗ್ ಥ್ರೋಬಾಲ್ ಕ್ರಿಕೆಟ್ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.

ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಎಸ್. ಪಾಟೀಲ ಕೂಚಬಾಳ, ಪಿಎಸ್‌ಐ ರಾಮನಗೌಡ ಸಂಕನಾಳ, ವಿಜಯಸಿಂಗ ಹಜೇರಿ ಮಾತನಾಡಿದರು. ರಜಪೂತ ಸಮಾಜದ ಅಧ್ಯಕ್ಷ ಹರಿಸಿಂಗ ಮೂಲಿಮನಿ, ಕಾಶಿನಾಥ ಮುರಾಳ, ಎಂ.ಆರ್.ಕತ್ತಿ, ತಿಪ್ಪಣ್ಣ ಸಜ್ಜನ್, ಇಬ್ರಾಹಿಂ ಮನ್ಸೂರ, ಎಸ್.ಬಿ. ಕಟ್ಟಿಮನಿ, ಪ್ರಕಾಶ ಹಜೇರಿ, ಮಾನಸಿಂಗ್ ಕೊಕಟನೂರ, ರವಿ ಕಟ್ಟಿಮನಿ, ಬಾಲಾಜಿ ಹಜೇರಿ, ಭವಾನಿಸಿಂಗ ಮೂಲಿಮನಿ, ಜೈಸಿಂಗ ಮೂಲಿಮನಿ, ಬಾಲಾಜಿ ಇದ್ದರು.

# 'ಗ್ರಂಥಾಲಯಗಳ ಕುಂದು ಕೊರತೆ ನಿವಾರಿಸಿ'

ಸಿಂದಗಿ, ಅ.7– ಸಿಂದಗಿ, ಆಲಮೇಲ, ದೇವರಹಿಪ್ಪರಗಿ ಈ ಮೂರು ತಾಲ್ಲೂಕುಗಳ ಅರಿವು ಕೇಂದ್ರ ಗ್ರಾಮ ಪಂಚಾಯ್ತಿ ಗ್ರಂಥಾಲಯಗಳ ಮೇಲ್ವಿಚಾರಕರು ಗ್ರಂಥಾಲಯಗಳ ಕುಂದು ಕೊರತೆ ನಿವಾರಣೆಗಾಗಿ ಆಗ್ರಹಿಸಿ ಪಟ್ಟಣದ ತಾಲ್ಲೂಕು ಪಂಚಾಯ್ತಿ ಕಾರ್ಯಾಲಯದ ಸಭಾಭವನದಲ್ಲಿ ಇಒ ರಾಮು ಜಿ.ಅಗ್ನಿ ಅವರಿಗೆ ಮನವಿ ಸಲ್ಲಿಸಿದರು.

ಗ್ರಂಥಾಲಯಗಳ ಮೇಲ್ವಿಚಾರಕರ ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಶಂಕರ ಉಕಮನಾಳ ಮಾತನಾಡಿ, ಗ್ರಂಥಾಲಯಗಳ ಮೇಲ್ವಿಚಾರಕರ ವೇತನ ತಾರತಮ್ಯ, ಬಾಕಿ ವೇತನ ವಿಳಂಬ, ಸಾದಿಲ್ವಾರು, ಪತ್ರಿಕೆಗಳ ಬಿಲ್ ನೀಡಿಲ್ಲ ಎಂದು ತಿಳಿಸಿದರು.

ಗ್ರಂಥಾಲಯಗಳು ಡಿಜಿಟಲ್ ಗ್ರಂಥಾಲಯಗಳಾಗಿ ಮೇಲ್ದರ್ಜೆಗೇರಿ ಅರಿವು ಕೇಂದ್ರಗಳಾಗಿದ್ದರೂ ಮೂರು ತಾಲ್ಲೂಕುಗಳ ಹೆಚ್ಚಿನ ಕೇಂದ್ರಗಳಲ್ಲಿ ಕಂಪ್ಯೂಟರ್ ಗಳನ್ನು ನೀಡಿಲ್ಲ. ಕಂಪ್ಯೂಟರ್ ಇದ್ದ ಕಡೆ ಇಂಟರ್ ನೆಟ್ ಅಳವಡಿಕೆಯಾಗದೇ ಇರುವುದು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಪುಸ್ತಕಗಳನ್ನು ಒದಗಿಸಿಲ್ಲ ಎಂದರು.

ಮೂರು ತಾಲ್ಲೂಕುಗಳ ಅರಿವು ಕೇಂದ್ರಗಳ ಸಂಘಟನೆ ಗೌರವಾಧ್ಯಕ್ಷ ಗುರು ಆರ್.ಹಿರೇಮಠ, ಸಿಂದಗಿ ತಾಲ್ಲೂಕು ಘಟಕದ ಅಧ್ಯಕ್ಷ ಸಂತೋಷ ಭಜಂತ್ರಿ, ಕಾರ್ಯದರ್ಶಿ ಶಂಕರ ಅಗಸರ, ಭೀಮಸಿಂಗ್ ರಾಠೋಡ, ಲಕ್ಷ್ಮಣ ಪೊದ್ದಾರ, ಗೌಡಪ್ಪ ಬಿರಾದಾರ, ಮಲ್ಲಯ್ಯ ಮಠ, ಪಿ.ಬಿ.ಬೋಗುಂಡಿ, ಎಸ್.ಎಸ್.ಪಾತ್ರೋಟ, ಎಂ.ಎನ್.ಕುರಿಕಾಯಿ, ನಿಂಗಣ್ಣ ಯಳಮೇಲಿ, ಎಸ್.ಎಸ್.ಯತ್ನಾಳ, ಎಂ.ವೈ.ಬನಸೋಡೆ ಇದ್ದರು.

# ಪಟ್ಟಣದ ಅಭಿವೃದ್ಧಿಗೆ ಆದ್ಯತೆ: ಶಾಸಕ ಸಿ.ಎಸ್. ನಾಡಗೌಡ ಹೇಳಿಕೆ

ತಾಳಿಕೋಟೆ, ಅ.7– ಪಟ್ಟಣ ಕ್ಷಿಪ್ರವಾಗಿ ಬೆಳೆಯುತ್ತಿರುವುದರಿಂದ ಜನರಿಗೆ ಮೂಲ ಸೌಲಭ್ಯಗಳಾದ ಶುದ್ಧ ಕುಡಿಯುವ ನೀರು, ರಸ್ತೆ, ಸಮರ್ಪಕ ವಿದ್ಯುತ್ ಪೂರೈಕೆ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಪ್ರಾತಿನಿಧ್ಯ ಕೊಟ್ಟು ಕೆಲಸ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ, ಶಾಸಕ ಸಿ.ಎಸ್. ನಾಡಗೌಡ ಅಪ್ಪಾಜಿ ಹೇಳಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪ್ರಗತಿಪರಿಶೀಲನಾ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪುರಸಭೆಯ ಕರ ವಸೂಲಿ ವ್ಯವಸ್ಥೆಯು ಉತ್ತಮವಾಗಿದೆ. ಆದರೆ ಕೆಲವು ವಾಣಿಜ್ಯ ಮಳಿಗೆಗಳ ಬಾಡಿಗೆ ಸಂಗ್ರಹಿಸುವಲ್ಲಿ ವಿಳಂಬವಾಗಿದೆ. ಅದನ್ನು ತೀವ್ರಗೊಳಿಸಲು ಅಧಿಕಾರಿಗಳಿಗೆ ಆದೇಶಿಸಿದ್ದೇನೆ. ಉತಾರೆ ವಿತರಣೆಯ ಸಮಸ್ಯೆಯನ್ನು ಸೂಕ್ತವಾಗಿ ಪರಿಹರಿಸಲು ಸೂಚನೆ ನೀಡಿದ್ದು ಎಲ್ಲಾ ದಾಖಲೆ ಪತ್ರಗಳು ಸರಿಯಾಗಿದ್ದಲ್ಲಿ ಶೀಘ್ರವಾಗಿ ವಿತರಣೆಗೆ ಮಾಡಲು ತಿಳಿಸಿದ್ದೇನೆ ಎಂದರು.

ಪಟ್ಟಣದಲ್ಲಿ ಹಿಂದೆ ನಡೆದ ಕೆಲವು ಕಾಮಗಾರಿಗಳು ಕಳಪೆ ಮಟ್ಟದ್ದಾಗಿರುವುದರ ಜೊತೆಗೆ ಕೆಲವು ಸ್ಥಗಿತಗೊಂಡಿವೆ. ಆದರೂ ಗೊತ್ತಿಗದಾರರು 3.17 ಲಕ್ಷ ಬಿಲ್ ತೆಗೆದುಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಇಂಥವರ ವಿರುದ್ಧ ಕಠಿಣ ಕಾನೂನು ಜರುಗಿಸಲು ಅಧಿಕಾರಿಗಳಿಗೆ ತಿಳಿಸಿದ್ದೇನೆ ಎಂದ ಅವರು, ಬೀದಿ ದೀಪದ ಸಮರ್ಪಕ ನಿರ್ವಹಣೆಯಲ್ಲಿ ಯಾವುದೇ ರೀತಿಯ ನಿಷ್ಕಾಳಜಿ ತೋರಬಾರದೆಂದು ಆದೇಶಿಸಿದ್ದೇನೆ ಎಂದು ತಿಳಿಸಿದರು.

ಪುರಸಭೆ ವ್ಯಾಪ್ತಿಯ ಕೆಲವು ಉದ್ಯಾನಗಳನ್ನು ಅತಿಕ್ರಮಣದ ಮಾಹಿತಿ ಇದ್ದು, ಇದರ ಕುರಿತು ವರದಿ ಪಡೆದು ಕ್ರಮ ವಹಿಸಲಾಗುವುದು. ಕೆರೆ ಅಭಿವೃದ್ಧಿ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ. ಸರ್ಕಾರದಿಂದ ಹೆಚ್ಚು ಅನುದಾನವನ್ನು ಪಡೆದುಕೊಂಡು ಹಾಗೂ ಎಸ್‌ಎಫ್‌ಸಿ ಅನುದಾನ ಬಳಸಿಕೊಂಡು ಅಭಿವೃದ್ಧಿ ಪಡಿಸಲಾಗುವುದು ಎಂದರು.

ಯೋಜನಾ ನಿರ್ದೇಶಕ ಬಿ.ಎ. ಸೌದಾಘರ, ಪುರಸಭೆ ಮುಖ್ಯಾಧಿಕಾರಿ ಮೋಹನ ಜಾದವ, ಪಿಎಸ್‌ಐ ರಾಮನಗೌಡ ಸಂಕನಾಳ, ಪುರಸಭಾ ಸದಸ್ಯರುಗಳಾದ ಯಾಸೀನ ಮಮದಾಪೂರ, ಅಕ್ಕಮಹಾದೇವಿ ಕಟ್ಟಿಮನಿ, .ಡಿ.ವಿ. ಪಾಟೀಲ, ಮಲ್ಲಿಕಾರ್ಜುನ ಪಟ್ಟಣಶೆಟ್ಟಿ, ಅಣ್ಣಪ್ಪ ಜಗತಾಪ, ಪರಶುರಾಮ ತಂಗಡಗಿ, ಮುಸ್ತಫಾ ಚೌಧರಿ, ಮುದುಕಪ್ಪ ಬಡಿಗೇರ, ನಿಂಗಪ್ಪ ಕುಂಟೋಜಿ,ಇಸ್ಮಾಯಿಲಬಿ ಮಕಾನದಾರ, ಸಾಜೀದಾಬೇಗಂ. ಎಂ. ಬೇಪಾರಿ, ಶಾಂತಾಬಾಯಿ ಹೊಟ್ಟಿ, ಜುಬೇದಾ ಹು ಜಮಾದಾರ, ಫಾತಿಮಾಬಿ ಖಾಜಾಬಸರಿ, ಪುರಸಭೆ ಸಿಬ್ಬಂದಿ ಸಿದ್ದಲಿಂಗಯ್ಯ ಚೊಂಡಿಪಾಟೀಲ, ರೀಪಾದ ಜೋಶಿ, ಶಿವಾನಂದ ಜುಮನಾಳ,ಸಂದೀಪ , ಸುರೇಶ ಅಮರಣ್ಣವರ, ಡಿ.ಬಿ.ಜಾನ್ವೇಕರ, ಸಿದ್ದಪ್ಪ ಕೊಳ್ಳಿ ಇದ್ದರು.

# ಮಹಾರಾಷ್ಟ್ರಕ್ಕೆ ಸಾಗಿಸುತ್ತಿದ್ದ ಕ್ಷೀರಭಾಗ್ಯ ಯೋಜನೆಯ ಹಾಲಿನ ಪುಡಿ ವಶ

**ಬಾಗಲಕೋಟೆ, ಅ.7– ತಾಲ್ಲೂಕಿನ ಸೂಳಿಕೇರಿಯಿಂದ ಮಹಾರಾಷ್ಟ್ರ ರಾಜ್ಯಕ್ಕೆ ಅಕ್ರಮವಾಗಿ ಸಾಗಿಸುತ್ತಿದ್ದ, ಶಾಲಾ ಮಕ್ಕಳಿಗೆ ಕ್ಷೀರಭಾಗ್ಯ ಯೋಜನೆಯಡಿ ಕೊಡುವ 17.90 ಲಕ್ಷ ಮೌಲ್ಯದ 44.7 ಕ್ವಿಂಟಲ್ ಹಾಲಿನ ಪುಡಿಯನ್ನು ಶುಕ್ರವಾರ ಮಧ್ಯರಾತ್ರಿ ಬಾಗಲಕೋಟೆ ಸಿಇಎನ್ ಠಾಣೆಯ ಪೊಲೀಸರು ವಶಪಡಿಸಿಕೊಂಡಿದ್ದಾರೆ.**

ಹಾಲಿನ ಪುಡಿಯ ಜೊತೆಗೆ 3.25 ಕ್ವಿಂಟಲ್ ರಾಗಿ ಹಿಟ್ಟು, 50 ಲೀಟರ್ ಅಡುಗೆ ಎಣ್ಣೆ ಸೇರಿ ಒಟ್ಟು 18.14 ಲಕ್ಷ ಮೌಲ್ಯದ ವಸ್ತುಗಳು ಹಾಗೂ ಈ ವಸ್ತುಗಳನ್ನು ಸಾಗಿಸುತ್ತಿದ್ದ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿ ಸಿದ್ದಪ್ಪ ಕಿತ್ತಲಿ ಎಂಬವರನ್ನು ಬಂಧಿಸಿದ್ದಾರೆ.

ಜಿಲ್ಲೆಯ ಹುನಗುಂದ, ಬಾದಾಮಿ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಪೂರೈಸುವ ಗುತ್ತಿಗೆಯನ್ನು ಮಹಾಲಿಂಗಪುರದ ಶ್ರೀಶೈಲ ಅಂಗಡಿ ಎಂಬವರು ಪಡೆದಿದ್ದರು. ಅವರು ಸಿದ್ದಪ್ಪ ಕಿತ್ತಲಿ ಅವರಿಗೆ ಉಪ ಗುತ್ತಿಗೆ ನೀಡಿದ್ದರು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ತಿಳಿಸಿದ್ದಾರೆ.

ಅಧಿಕಾರಿಗಳೊಂದಿಗೆ ಶಾಮೀಲಾಗಿ ಶಾಲೆಗಳಿಗೆ ಹಾಲಿನ ಪುಡಿಯನ್ನು ಸಂಪೂರ್ಣ ಪೂರೈಸದೆ ಉಳಿಸಿಕೊಳ್ಳುತ್ತಿದ್ದರು. ಅದನ್ನು ಅಕ್ರಮವಾಗಿ ಮಹಾರಾಷ್ಟ್ರಕ್ಕೆ ಕಳುಹಿಸುತ್ತಿದ್ದರು ಎಂದು ದೂರು ದಾಖಲಾಗಿದೆ.

# ದೇವಿ ಆರಾಧನೆಯಿಂದ ನೆಮ್ಮದಿ ಲಭ್ಯ: ಒಹಿಲೇಶ್ವರ ಸ್ವಾಮೀಜಿ ಅಭಿಮತ



**ಗುಳೇದಗುಡ್ಡ, ಅ.7– 'ದೇವಿ ಆರಾಧನೆ ಮಾಡುವುದರಿಂದ ನಮ್ಮ ಜೀವನದಲ್ಲಿ ಸುಖ, ಶಾಂತಿ, ನೆಮ್ಮದಿ ಯಶಸ್ಸು ಪಡೆಯಬಹುದು. ನವರಾತ್ರಿಯಲ್ಲಿ ನವದುರ್ಗೆಯರ ಆರಾಧನೆ ಮನುಷ್ಯನಿಗೆ ಶಕ್ತಿ ತುಂಬುವುದರ ಜೊತೆಗೆ ಹೊಸ ಚೈತನ್ಯ ಮೂಡಿಸುತ್ತದೆ' ಎಂದು ಕಸ್ತೂರಿಮಠದ ಒಹಿಲೇಶ್ವರ ಸ್ವಾಮೀಜಿ ಹೇಳಿದರು.**

ತಾಲ್ಲೂಕಿನ ತಿಮ್ಮಸಾಗರ ಗ್ರಾಮದ ಗ್ರಾಮದೇವತೆ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ ನಡೆದ ದೇವಿ ಪುರಾಣ ಕಾರ್ಯಕ್ರಮದಲ್ಲಿ ದೇವಿ ಪಾರಾಯಣ ನಡೆಸಿಕೊಟ್ಟು, 'ಹಬ್ಬಗಳು ನಮ್ಮ ದೇಶದ ಪ್ರಾಚೀನ ಸಂಸ್ಕೃತಿಯ ಪ್ರತೀಕ. ಪಾಂಡವರು ಸಹ ವಿಜಯದಶಮಿ ಸಮಯದಲ್ಲಿ ವಿಜಯ ಸಾಧಿಸಿದ್ದು, ಧರ್ಮ ರಕ್ಷಣೆ ಮಾಡುವುದು ಎಲ್ಲರ ಜವಾಬ್ದಾರಿಯಾಗಿದೆ. ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರ ಕಲಿಸಬೇಕು' ಎಂದರು.

ಸಂಗೀತ ಶಿಕ್ಷಕ ಬಸವರಾಜ ಸಿಂದಗಿಮಠ, ಭೀಮಸಿಂಗ ರಾಠೋಡ, ರಾಘು ಬಂಡಿವಡ್ಡರ ಸಂಗೀತ ಸೇವೆ ನಡೆಸಿಕೊಟ್ಟರು. ಮುತ್ತನಗೌಡ ಪಾಟೀಲ, ಮುತ್ತಪ್ಪ ತೆಗ್ಗಿ, ಶಂಕ್ರಯ್ಯ ವಿಭೂತಿ ಮುತ್ತಪ್ಪ ಕಾಳನ್ನವರ, ರಂಗಪ್ಪ ನಂದಿಕೇಶ್ವರ, ಭೀಮಪ್ಪ ಬಡಿಗೇರ, ಗ್ರಾಮ ಪಂಚಾಯಿತಿ ಸದಸ್ಯರಾದ ಅಯ್ಯಪ್ಪ ಸೀಮಿಕೇರಿ, ಲಕ್ಷ್ಮಿಬಾಯಿ ವಾಲೀಕಾರ ರತ್ನಾ ಬಡಿಗೇರ, ಮಲ್ಲಪ್ಪ ಗಂಗಶೆಟ್ಟಿ, ಇದ್ದರು.

## ಪಾರದರ್ಶಕ ಚುನಾವಣೆಗೆ ತರಬೇತಿ ಅವಶ್ಯಕ: ಪಾಟೀಲ




ಕೊಪ್ಪಳ, ಅ.7– 'ತರಬೇತಿ ನಿರಂತರ ಪ್ರಕ್ರಿಯೆಯಯಾಗಿದ್ದು, ಇದರಿಂದಾಗಿ ಸಹಕಾರ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಪಾರದರ್ಶಕ ಚುನಾವಣೆಗೆ ತರಬೇತಿ ಅವಶ್ಯಕತೆಯಿದೆ' ಎಂದು ಆರ್‌ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷ ವಿಶ್ವನಾಥ ಪಾಟೀಲ ಹೇಳಿದರು.

ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸಹಕಾರ ಇಲಾಖೆ ಸಹಯೋಗದಲ್ಲಿ ನಗರದಲ್ಲಿ ನಡೆದ ಜಿಲ್ಲೆಯಲ್ಲಿ ಚುನಾವಣೆ ಜರುಗುವ ಸಹಕಾರ ಸಂಘಗಳ ರಿಟರ್ನಿಂಗ್ ಅಧಿಕಾರಿಗಳು, ಸಹಾಯಕ ರಿಟರ್ನಿಂಗ್ ಅಧಿಕಾರಿಗಳು, ಪರಿಶೀಲನಾ ಅಧಿಕಾ–ರಿಗಳು ಮತ್ತು ಸಿಇಒಗಳಿಗೆ ಒಂದು ದಿನದ ರಾಜ್ಯ ಮಟ್ಟದ ವಿಶೇಷ ಸಹಕಾರ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶೇಖರಗೌಡ ಮಾಲಿಪಾಟೀಲ ಮಾತನಾಡಿ 'ಯೂನಿಯನ್ ಕಾಲಕಾಲಕ್ಕೆ ಸಹಕಾರ ಸಂಘಗಳ ಕಾಯ್ದೆಯಲ್ಲಿ ಬದಲಾವಣೆಯಾದ ವಿಷಯಗಳ ಕುರಿತು ಜಿಲ್ಲೆಯ ವಿವಿಧ ಸಹಕಾರ ಸಂಘಗಳ ಸಿಬ್ಬಂದಿಗೆ ಹಾಗೂ ಆಡಳಿತ ಮಂಡಳಿಗೆ ಪರಿಣಾಮಕಾರಿ ತರಬೇತಿ ನೀಡುತ್ತಿದೆ' ಎಂದರು.

ಸಹಕಾರ ಉಪ ನಿಬಂಧಕ ದಸ್ತಗಿರಿ ಅಲಿ, ಸಹಕಾರ ಶಿಕ್ಷಣಾಧಿಕಾರಿ ಶರಣಬಸಪ್ಪ ಕಾಟ್ರಳ್ಳಿ, ಆರ್‌ಕೆಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಶಿವಶಂಕರಗೌಡ ಪಾಟೀಲ ಕಡೂರು, ಯೂನಿಯನ್ ಉಪಾಧ್ಯಕ್ಷ ಹಾಲಯ್ಯ ವಿ. ಹುಡೇಜಾಲಿ, ನಿರ್ದೇಶಕರಾದ ಶಕುಂತಲಾ ಎಚ್. ಹುಡೇಜಾಲಿ, ತೋಟಪ್ಪ ಎಚ್, ಕಾಮನೂರು, ದಾದಾಪೀರ್ ಗೋನೆಗೊಂಡಲ, ಸಹಕಾರ ಸಂಘಗಳ ಸಹಾಯಕ ನಿಬಂಧಕ ಸಜ್ಜನರ ಪ್ರಕಾಶ, ಯೂನಿಯನ್ ಸಿಇಒ ಅಕ್ಷಯ್ ಕುಮಾರ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

## ಮದ್ಯವರ್ಜನ ಶಿಬಿರದ ಶಿಬಿರಾರ್ಥಿಗಳಿಗೆ ಉಚಿತ ಕ್ಷೌರ

ಕಾರಟಗಿ, ಅ.7– ಪಟ್ಟಣದ ಕೆರೆಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.



ಸಿ. ಟ್ರಸ್ಟ್ ಹಾಗೂ ಮತ್ತಿತರ ಸಂಘಟನೆಗಳ ಆಶ್ರಯದಲ್ಲಿ ಸೆ. 29ರಿಂದ ಮದ್ಯವರ್ಜನ ಶಿಬಿರ ನಡೆದಿದ್ದು, ಭಾನುವಾರ ಸಮಾರೋಪವಾಗಲಿದೆ.

ಪಟ್ಟಣದ ಹಡಪದ ಹಾಗೂ ಸವಿತಾ ಸಮಾಜದವರು ಶಿಬಿರಾರ್ಥಿಗಳಿಗೆ ಉಚಿತ ಕ್ಷೌರ ಮಾಡಿದರು. 72 ಶಿಬಿರಾರ್ಥಿಗಳು ಇದ್ದು, ಹಡಪದ ಹಾಗೂ ಸವಿತಾ ಸಮಾಜದ ಮಹಾದೇವಪ್ಪ ಹಡಪದ, ಶಿವಕುಮಾರ ಹಡಪದ, ರಾಮಾಂಜನೇಯ ನೇತೃತ್ವದಲ್ಲಿ 32 ಯುವಕರು ಶಿಬಿರ ನಡೆಯುವಲ್ಲಿಗೇ ಆಗಮಿಸಿ, ಕ್ಷೌರ ಮಾಡಿದರು. ಸಮಾಜದ ಮುಖ್ಯಸ್ಥರಾದ ಮಹಾದೇವಪ್ಪ ಹಡಪದ, ಶಿವಕುಮಾರ ಹಡಪದ ಅವರನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಿಂಗಪ್ಪ ಡಿ. ಅಗಸರ್ ನೇತೃತ್ವದಲ್ಲಿ ಸನ್ಮಾನಿಸಿ, ಯುವಕರಿಗೆ ಪುಸ್ತಕ ವಿತರಿಸಲಾಯಿತು.

## ಗಂಗಾವತಿ ಉಪ ವಿಭಾಗ ರಚನೆ ಪ್ರಸ್ತಾವನೆಗೆ ವಿರೋಧ



ಕುಷ್ಟಗಿ, ಅ.7– ಗಂಗಾವತಿಯಲ್ಲಿ ಆರಂಭಗೊಳ್ಳಲು ಪ್ರಸ್ತಾವನೆ ಸಲ್ಲಿಕೆಯಾಗಿದೆ ಎನ್ನಲಾಗಿರುವ ಉಪ ವಿಭಾಗಾಧಿಕಾರಿ ಕಚೇರಿ ವ್ಯಾಪ್ತಿಗೆ ಕುಷ್ಟಗಿ ತಾಲ್ಲೂಕನ್ನು ಸೇರ್ಪಡೆಗೊಳಿಸುವುದನ್ನು ವಿರೋಧಿಸಿ ಪಟ್ಟಣದಲ್ಲಿ ಸಾರ್ವಜನಿಕರು ಪ್ರತಿಭಟನೆ ನಡೆಸಿದರು.

ಕಾರ್ಗಿಲ್ ಯೋಧ ಮಲ್ಲಯ್ಯ ವೃತ್ತ ದಿಂದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ಪ್ರತಿಭಟನಕಾರರು ನಂತರ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಸಮಾವೇಶಗೊಂಡು ಸರ್ಕಾರಕ್ಕೆ ಬರೆದ ಮನವಿಯನ್ನು ತಹಶೀಲ್ದಾರ್ ಅಶೋಕ ಶಿಗ್ಗಾವಿ ಅವರಿಗೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಕೆ.ಶರಣಪ್ಪ, ದೇವೇಂದ್ರಪ್ಪ ಬಳೂಟಗಿ, ಕಲ್ಲೇಶ ತಾಳದ, ಅಮರೇಗೌಡ ಜಾಲಿಹಾಳ, ದೊಡ್ಡಬಸವನಗೌಡ ಬಯ್ಯಾಪುರ, ಶುಕರಾಜ ತಾಳಕೇರಿ, ನಬಿಸಾಬ್ ಕುಷ್ಟಗಿ ಸೇರಿದಂತೆ ಅನೇಕ ಪ್ರಮುಖರು ಮಾತನಾಡಿ, ಕುಷ್ಟಗಿ ತಾಲ್ಲೂಕನ್ನು ಕೊಪ್ಪಳ ಉಪ ವಿಭಾಗದಲ್ಲಿಯೇ ಉಳಿಸಬೇಕು. ಅಥವಾ ಕನಕಗಿರಿ, ಯಲಬುರ್ಗಾ ತಾಲ್ಲೂಕುಗಳನ್ನು ಒಳಗೊಂಡಂತೆ ಕುಷ್ಟಗಿಯಲ್ಲಿ ಉಪ ವಿಭಾಗ ಆರಂಭಿಸುವಂತೆ ಒತ್ತಾಯಿಸಿದರು.

ಮಲ್ಲಯ್ಯ ವೃತ್ತದಲ್ಲಿ ಪ್ರತಿಭಟನಾ ಜಾಥಾಕ್ಕೆ ಮದ್ದಾನೇಶ್ವರ ಮಠದ ಕರಿಬಸವ ಸ್ವಾಮೀಜಿ ಚಾಲನೆ ನೀಡಿದರು. ವಕೀಲರ ಸಂಘದ ಅಧ್ಯಕ್ಷ ಸಂಗನಗೌಡ ಪಾಟೀಲ, ಆರ್.ಕೆ.ದೇಸಾಯಿ, ನಾಗಪ್ಪ ಸೂಡಿ, ಎಸ್.ಎಚ್.ಹಿರೇಮಠ, ವಸಂತ ಮೇಲಿನಮನಿ, ಕೃಷ್ಣಮೂರ್ತಿ ಟೆಂಗುಂಟಿ, ಡಾ.ಭೀಮನಗೌಡ ಜಾಲಿಹಾಳ, ಡಾ.ರವಿಕುಮಾರ ದಾನಿ, ಕಿರಣ ಜ್ಯೋತಿ, ಅಬ್ದುಲ್ ನಯೀಂ, ಬಸವರಾಜ ಗಾಣಿಗೇರ, ಮಹಾಂತಯ್ಯ ಅರಳೆಲೆಮಠ, ಅಯ್ಯಣ್ಣ ಪಲ್ಲೇದ, ಮೋಹನಲಾಲ್ ಜೈನ್ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ನ.26ರಿಂದ ಕೊಪ್ಪಳದಲ್ಲಿ ಅಗ್ನಿವೀರ ನೇಮಕಾತಿ ರ್‍ಯಾಲಿ

**ಕಲಬುರಗಿ, ಅ.7– 'ಬೆಂಗಳೂರಿನ ಪ್ರಧಾನ ನೇಮಕಾತಿ ವಲಯ ಕಚೇರಿ ಹಾಗೂ ಬೆಳಗಾವಿ ಸೇನಾ ನೇಮಕಾತಿ ಕಚೇರಿಯಿಂದ ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ ನ.26ರಿಂದ ಡಿಸೆಂಬರ್ 8ರವರೆಗೆ ಅಗ್ನಿವೀರ ನೇಮಕಾತಿ ರಯಾಲಿ ಆಯೋಜಿಸಲಾಗಿದೆ' ಎಂದು ಬೆಳಗಾವಿ ಸೇನಾ ನೇಮಕಾತಿ ಕಚೇರಿ ಅಧಿಕಾ–ರಿಗಳು ತಿಳಿಸಿದ್ದಾರೆ.**

ಅಗ್ನಿವೀರ್ ಜನರಲ್ ಡ್ಯೂಟಿ, ಅಗ್ನಿವೀರ್ ಟೆಕ್ನಿಕಲ್, ಅಗ್ನಿವೀರ್ ಟ್ರೇಡ್ಸ್‌ಮನ್, ಅಗ್ನಿವೀರ್ ಕ್ಲರ್ಕ್/ ಸ್ಟೋರ್ ಕೀಪರ್, ಟೆಕ್ನಿಕಲ್ ವಿಭಾಗಗಳಿಗೆ ನೇಮಕಾತಿ ರಯಾಲಿ ನಡೆಯಲಿದ್ದು, ಬೆಳಗಾವಿ, ಬೀದರ್, ಕಲಬುರಗಿ, ಯಾದಗಿರಿ, ರಾಯಚೂರ ಹಾಗೂ ಕೊಪ್ಪಳ ಜಿಲ್ಲೆಗಳ ಅಭ್ಯರ್ಥಿಗಳಿಗಾಗಿ ಈ ನೇಮಕಾತಿ ರಯಾಲಿ ಆಯೋಜಿಸಲಾಗಿದೆ.

ಸಾಮಾನ್ಯ ಪ್ರವೇಶ ಪರೀಕ್ಷೆಯ ಫಲಿತಾಂಶವನ್ನು **joinindianarmy.nic.in** ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಅ.10ರಿಂದ ಶಾರ್ಟ್ ಲಿಸ್ಟ್‌ಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರವೇಶ ಪತ್ರ ನೀಡಲಾಗುತ್ತದೆ. ಅಭ್ಯರ್ಥಿಗಳು ಯಾವುದೇ ಮಧ್ಯವರ್ತಿಗಳ ಆಮಿಷಕ್ಕೊಳಗಾಗಬಾರದು. ನೇಮಕಾತಿ ಪರೀಕ್ಷೆ ಹಾಗೂ ಅಂತಿಮ ಅರ್ಹತೆ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

## ವೀರಶೈವ ಮಹಾಸಭಾ: ಜಿಲ್ಲಾ ಪದಾಧಿಕಾರಿಗಳ ಆಯ್ಕೆ

ಗದಗ, ಅ.7– 'ಪದಾಧಿಕಾರಿಗಳ ಆಯ್ಕೆ ಬಳಿಕ ಮಹಾಸಭಾಕ್ಕೆ ಬಲ ಬಂದಂತಾಗಿದೆ. ರಾಜ್ಯ ಕಾರ್ಯಕಾರಿ ಮಂಡಳಿ ಸದಸ್ಯ ಸಂಗನಗೌಡ ಪಾಟೀಲ ಹಾಗೂ ಪದಾಧಿಕಾರಿಗಳ ಸಲಹೆ ಪಡೆದು ರಚನಾತ್ಮಕ ಕಾರ್ಯಗಳನ್ನು ಮಾಡಲಾಗುವುದು' ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ಹೇಳಿದರು.

ನಗರದ ವೀರಶೈವ ಜನರಲ್ ಲೈಬ್ರರಿಯ ಆವರಣದಲ್ಲಿರುವ ಅಖಿಲ ಭಾರತ ವೀರಶೈವ ಮಹಾಸಭಾ ಗದಗ ಜಿಲ್ಲಾ ಘಟಕದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ಸಮಾಜದ ಎಲ್ಲ ಒಳಪಂಗಡಗಳನ್ನು ಸಂಘಟನೆಯಲ್ಲಿ ಒಳಗೊಳ್ಳುವಂತೆ ಮಾಡಲು ಸದಸ್ಯತ್ವ ಅಭಿಯಾನ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳನ್ನು ಘೋಷಿಸಲಾಯಿತು.




ಈಗಾಗಲೇ ಅಧ್ಯಕ್ಷ ಸ್ಥಾನಕ್ಕೆ ಶರಣಬಸಪ್ಪ ಗುಡಿಮನಿ ಅವಿರೋಧವಾಗಿ ಆಯ್ಕೆಯಾಗಿದ್ದು, ಉಪಾಧ್ಯಕ್ಷರಾಗಿ ಬಸವರಾಜ ಅಂಗಡಿ, ಭೀಮರಡ್ಡೇಪ್ಪ ರಡ್ಡೇರ, ವಿಜಯಲಕ್ಷ್ಮೀ ಮಾನ್ವಿ, ಚನ್ನಯ್ಯ ಸಂಗಳಮಠ, ಪ್ರಧಾನ ಕಾರ್ಯದರ್ಶಿಯಾಗಿ ಮುರುಘ ರಾಜೇಂದ್ರ ಬಡ್ನಿ, ಕೋಶಾಧ್ಯಕ್ಷರಾಗಿ ಚನ್ನವೀರಪ್ಪ ಹುಣಶೀಕಟ್ಟಿ, ಕಾರ್ಯದರ್ಶಿಯಾಗಿ ಕಾಶಪ್ಪ ಗದಗಿನ, ಸುವರ್ಣಾ ಶೆಲ್ಲಿಕೇರಿ, ನಿರ್ಮಲಾ ಚಿಕ್ಕನಗೌಡ್ರ ಹಾಗೂ ಸಿದ್ಧಲಿಂಗಪ್ಪ ಪಟ್ಟಣಶೆಟ್ಟಿ ಅವರನ್ನು ಜಿಲ್ಲಾ ಸಮಿತಿ ಸರ್ವ ನಿರ್ದೇಶಕರ ಸಭೆಯಲ್ಲಿ ಆಯ್ಕೆ ಮಾಡಲಾಯಿತು.

ಡಾ.ಶೇಖರ ಸಜ್ಜನರ ಹಾಗೂ ಎಂ.ಎಸ್. ಮಲ್ಲಾಪೂರ ಸೇರಿದಂತೆ ಹಲವರು ಸಂಘಟನೆ ಬಲವರ್ಧನೆಗೆ ಸಲಹೆ ಸೂಚನೆ ನೀಡಿದರು.

ಸಭೆಯಲ್ಲಿ ಸಂಗನಗೌಡ ಪಾಟೀಲ, ಬಸವರಾಜ ಬಿಳೇಯಲಿ, ನಾರಾಯಣಪೂರ, ಸಿದ್ದು ಪಲ್ಲೇದ, ಶ್ರೀಶೈಲಪ್ಪ ಚಳಗೇರಿ, ಚನ್ನಬಸಪ್ಪ ಕಂಠಿ, ಬಸನಗೌಡ ಪಾಟೀಲ, ಮುತ್ತನಗೌಡ ತೇಜಿಗೌಡ್ರ, ವಿಜಯಾನಂದ ಮುತ್ತಿನಪೆಂಡಿಮಠ, ಬಾಪೂಜಿ ಪಾಟೀಲ, ಶಿವಪ್ಪ ಅಂಕದ, ಉಮಾದೇವಿ ಕಾತರಕಿ, ಉಮಾದೇವಿ ನಾಯ್ಕರ, ಜಯಶ್ರೀ ಉಗಲಾಟದ ಭಾಗವಹಿಸಿದ್ದರು.

## ವಚನ ಸಾಹಿತ್ಯಕ್ಕೆ ಕಲಬುರ್ಗಿ ಕೊಡುಗೆ ಅಪಾರ

ಗದಗ, ಅ.7– 'ಸಂಶೋಧಕ ಡಾ. ಎಂ.ಎಂ.ಕಲಬುರ್ಗಿ ಅವರು ಪರಿಶ್ರಮಿ ಹಾಗೂ ಪ್ರತಿಭಾನ್ವಿತರು. ಕನ್ನಡ ನಾಡಿನಲ್ಲಿ ಅನೇಕ ಸಾಹಿತಿಗಳನ್ನು, ವಿದ್ಯಾರ್ಥಿಗಳನ್ನು ಸಂಶೋಧಕರನ್ನಾಗಿ ರೂಪಿಸುವಲ್ಲಿ ಕಲಬುರ್ಗಿಯವರ ಪಾತ್ರ ಮಹತ್ವದ್ದಾಗಿದೆ. ಕನ್ನಡಕ್ಕೆ, ಲಿಂಗಾಯತ ಧರ್ಮಕ್ಕೆ, ವಚನ ಸಾಹಿತ್ಯಕ್ಕೆ ಅವರ ಕೊಡುಗೆ ಅಪಾರವಾದುದು' ಎಂದು ತೋಂಟದ ಸಿದ್ಧರಾಮ ಸ್ವಾಮೀಜಿ ಹೇಳಿದರು.

ಲಿಂಗಾಯತ ಪ್ರಗತಿಶೀಲ ಸಂಘದ ಆಶ್ರಯದಲ್ಲಿ ನಗರದ ತೋಂಟದಾರ್ಯ ಮಠದಲ್ಲಿ ಈಚೆಗೆ ನಡೆದ 2,713ನೇ ಶಿವಾನುಭವದ ಸಾನ್ನಿಧ್ಯ ವಹಿಸಿ ಮಾತನಾಡಿದರು.



'ಡಾ.ಎಂ.ಎಂ.ಕಲಬುರ್ಗಿಯವರು ತಮ್ಮ ಬದುಕಿನುದ್ದಕ್ಕೂ ಸಂಶೋಧನೆ, ಕನ್ನಡ ಹಾಗೂ ಬಸವಣ್ಣನನ್ನು ಉಸಿರಾಗಿಸಿಕೊಂಡಿದ್ದರು. ಗದಗ ಮತ್ತು ನಾಗನೂರು ಮಠದ ಪ್ರಕಾಶನ ಸಂಸ್ಥೆಗಳಿಗೆ ಪ್ರೇರಕಶಕ್ತಿಯಾಗಿದ್ದರು. ಕರ್ನಾಟಕದಲ್ಲಿ ಹುಟ್ಟಿದ ಏಕೈಕ ಧರ್ಮ ಲಿಂಗಾಯತ ಧರ್ಮ. ಡಾ.ಫ.ಗು.ಹಳಕಟ್ಟಿ, ಆರ್.ಸಿ.ಹಿರೇಮಠ ಹಾಗೂ ಎಂ.ಎಂ.ಕಲಬುರ್ಗಿ ಸಂಶೋಧನಾ ಪೂರ್ವಕವಾಗಿ ವಚನಸಾಹಿತ್ಯವನ್ನು ಸಂಗ್ರಹಿಸಿ, ಸಂಶೋಧಿಸಿ, ಶರಣಸಾಹಿತ್ಯ ವನ್ನು ಉಳಿಸಿ ಬೆಳೆಸಿದ್ದಾರೆ' ಎಂದರು.

'ಯೋಗದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಚಿನ್ನದ ಪದಕ ಪಡೆದ ಸುಧಾ ಪಾಟೀಲ ಅವರ ಯೋಗ ಸಾಧನೆ ಮೆಚ್ಚುವಂತಹದ್ದು' ಎಂದು ಹೇಳಿದರು.

ಉಪನ್ಯಾಸ ನೀಡಿದ ಗದಗ ಸರ್ಕಾರಿ ಪ್ರಥ–ಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಶಿವಪ್ಪ ಕುರಿ, 'ದಕ್ಷಿಣದಲ್ಲಿ ಚಿದಾನಂದಮೂರ್ತಿ ಅವ–ರಿದ್ದಂತೆ ಉತ್ತರಕರ್ನಾಟಕದಲ್ಲಿ ಎಂ.ಎಂ. ಕಲಬುರ್ಗಿಯವರು ಇದ್ದರು. ಪ್ರತಿಯೊಂದನ್ನು ಸಂಶೋಧನೆಗೆ ಒಳಪಡಿಸಿ, ಜನರಿಗೆ ತಿಳಿಸುವ ಕೆಲಸ ಮಾಡಿದರು' ಎಂದರು.

ಮೃತ್ಯುಂಜಯ ಹಿರೇಮಠ ಹಾಗೂ ಗುರುನಾಥ್ ಸುತಾರ ವಚನ ಸಂಗೀತ ನಡೆಸಿಕೊಟ್ಟರು. ಕುಸುಮಾ ಬಿ.ಇಟಗಿ ಧರ್ಮಗ್ರಂಥ ಪಠಿಸಿದರು. ಮಲ್ಲಿಕಾರ್ಜುನ ಬಿ. ಇಟಗಿ ವಚನ ಚಿಂತನ ನಡೆಸಿಕೊಟ್ಟರು. ಡಾ. ಎಸ್.ಎಸ್. ಮಹಾದೇವಿ ಹುಬ್ಬಳ್ಳಿ ಹಾಗೂ ಸೋಮಶೇಖರ ಶಿವಪ್ಪ ಅನೂರಶೆಟ್ರ ದಾಸೋಹ ಸೇವೆ ವಹಿಸಿದ್ದರು.

ವಿದ್ಯಾವತಿ ಪ್ರಭು ಗಂಜಿಹಾಳ ನಿರೂಪಿಸಿದರು. ಶಿವಾನಂದ ಹೊಂಬಳ ಸ್ವಾಗತಿಸಿದರು. ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಬಾಲಚಂದ್ರ ಭರಮಗೌಡ್ರ, ಉಪಾಧ್ಯಕ್ಷ ಉಮೇಶ ಪುರದ, ಕಾರ್ಯದರ್ಶಿ ವೀರಣ್ಣ ಗೋಟಡಕಿ, ಸಹ ಕಾರ್ಯದರ್ಶಿ ಸೋಮಶೇಖರ ಪುರಾಣಿಕ, ನಾಗರಾಜ ಹಿರೇಮಠ, ಸಂಘಟನಾ ಕಾರ್ಯದರ್ಶಿ ಮಹೇಶ ಗಾಣಿಗೇರ, ಕೋಶಾಧ್ಯಕ್ಷ ಬಸವರಾಜ ಕಾಡಪ್ಪನವರ, ಶಿವಾನುಭವ ಸಮಿತಿ ಚೇರಮನ್ ಐ.ಬಿ.ಬೆನಕೊಪ್ಪ ಇದ್ದರು.

## ವೀರಶೈವ ಮಹಾಸಭಾ: ಜಿಲ್ಲಾ ಪದಾಧಿಕಾರಿಗಳ ಆಯ್ಕೆ



**ಗದಗ, ಅ.7– 'ಪದಾಧಿಕಾರಿಗಳ ಆಯ್ಕೆ ಬಳಿಕ ಮಹಾಸಭಾಕ್ಕೆ ಬಲ ಬಂದಂತಾಗಿದೆ. ರಾಜ್ಯ ಕಾರ್ಯಕಾರಿ ಮಂಡಳಿ ಸದಸ್ಯ ಸಂಗನಗೌಡ ಪಾಟೀಲ ಹಾಗೂ ಪದಾಧಿಕಾರಿಗಳ ಸಲಹೆ ಪಡೆದು ರಚನಾತ್ಮಕ ಕಾರ್ಯಗಳನ್ನು ಮಾಡಲಾಗುವುದು' ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ಹೇಳಿದರು.**

ನಗರದ ವೀರಶೈವ ಜನರಲ್ ಲೈಬ್ರರಿಯ ಆವರಣದಲ್ಲಿರುವ ಅಖಿಲ ಭಾರತ ವೀರಶೈವ ಮಹಾಸಭಾ ಗದಗ ಜಿಲ್ಲಾ ಘಟಕದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ಸಮಾಜದ ಎಲ್ಲ ಒಳಪಂಗಡಗಳನ್ನು ಸಂಘಟನೆಯಲ್ಲಿ ಒಳಗೊಳ್ಳುವಂತೆ ಮಾಡಲು ಸದಸ್ಯತ್ವ ಅಭಿಯಾನ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಘಟಕದ ನೂತನ ಪದಾಧಿಕಾ–ರಿಗಳನ್ನು ಘೋಷಿಸಲಾಯಿತು.

ಈಗಾಗಲೇ ಅಧ್ಯಕ್ಷ ಸ್ಥಾನಕ್ಕೆ ಶರಣಬಸಪ್ಪ ಗುಡಿಮನಿ ಅವಿರೋಧವಾಗಿ ಆಯ್ಕೆಯಾಗಿದ್ದು, ಉಪಾಧ್ಯಕ್ಷರಾಗಿ ಬಸವರಾಜ ಅಂಗಡಿ, ಭೀಮರಡ್ಡೇಪ್ಪ ರಡ್ಡೇರ, ವಿಜಯಲಕ್ಷ್ಮೀ ಮಾನ್ವಿ, ಚನ್ನಯ್ಯ ಸಂಗಳಮಠ, ಪ್ರಧಾನ ಕಾರ್ಯದರ್ಶಿಯಾಗಿ ಮುರುಘ ರಾಜೇಂದ್ರ ಬಡ್ನಿ, ಕೋಶಾಧ್ಯಕ್ಷರಾಗಿ ಚನ್ನವೀರಪ್ಪ ಹುಣಶೀಕಟ್ಟಿ, ಕಾರ್ಯದರ್ಶಿಯಾಗಿ ಕಾಶಪ್ಪ ಗದಗಿನ, ಸುವರ್ಣಾ ಶೆಲ್ಲಿಕೇರಿ, ನಿರ್ಮಲಾ ಚಿಕ್ಕನಗೌಡ್ರ ಹಾಗೂ ಸಿದ್ಧಲಿಂಗಪ್ಪ ಪಟ್ಟಣಶೆಟ್ಟಿ ಅವರನ್ನು ಜಿಲ್ಲಾ ಸಮಿತಿ ಸರ್ವ ನಿರ್ದೇಶಕರ ಸಭೆಯಲ್ಲಿ ಆಯ್ಕೆ ಮಾಡಲಾಯಿತು.

ಡಾ.ಶೇಖರ ಸಜ್ಜನರ ಹಾಗೂ ಎಂ.ಎಸ್.ಮಲ್ಲಾಪೂರ ಸೇ–ರಿದಂತೆ ಹಲವರು ಸಂಘಟನೆ ಬಲವರ್ಧನೆಗೆ ಸಲಹೆ ಸೂಚನೆ ನೀಡಿದರು.

ಸಭೆಯಲ್ಲಿ ಸಂಗನಗೌಡ ಪಾಟೀಲ, ಬಸವರಾಜ ಬಿಳೇಯಲಿ, ನಾರಾಯಣಪೂರ, ಸಿದ್ದು ಪಲ್ಲೇದ, ಶ್ರೀಶೈಲಪ್ಪ ಚಳಗೇರಿ, ಚನ್ನಬಸಪ್ಪ ಕಂಠಿ, ಬಸನಗೌಡ ಪಾಟೀಲ, ಮುತ್ತನಗೌಡ ತೇ–ಜಿಗೌಡ್ರ, ವಿಜಯಾನಂದ ಮುತ್ತಿನಪೆಂಡಿಮಠ, ಬಾಪೂಜಿ ಪಾಟೀಲ, ಶಿವಪ್ಪ ಅಂಕದ, ಉಮಾದೇವಿ ಕಾತರಕಿ, ಉಮಾದೇವಿ ನಾಯ್ಕರ, ಜಯಶ್ರೀ ಉಗಲಾಟದ ಭಾಗವಹಿಸಿದ್ದರು.

## 'ಭೂಮಿಯ ಫಲವತ್ತತೆ ಹೆಚ್ಚಿಸಲು ಕ್ರಮ'

ಕನಕಗಿರಿ, ಅ.7– ಸವಳು ಭೂಮಿಯನ್ನು ಫಲವತ್ತತೆ ಭೂಮಿಯನ್ನಾಗಿ ಪರಿವರ್ತಿಸಲು ಪ್ರಯತ್ನಿಸಲಾಗುವುದು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ರತ್ನಂ ಪಾಂಡೆಯ ಹೇಳಿದರು.

ತಾಲ್ಲೂಕಿನ ನವಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆದಾಪುರ ಗ್ರಾಮದ ಸವಳು ಭೂಮಿಯನ್ನು ಪರಿಶೀಲಿಸಿ ಅವರು ಮಾತನಾಡಿದರು. 'ಭೂಮಿ ಹಲವಾರು ವರ್ಷಗಳಿಂದ ಸವಳಾಗಿದ್ದು, ಭೂಮಿಯಲ್ಲಿ ಯಾವುದೇ ಬೆಳೆಯನ್ನು ಬೆಳೆಯಲು ಸಾಧ್ಯವಾಗುತ್ತಿಲ್ಲ' ಎಂದು ರೈತರು ಈ ವೇಳೆ ಸಿಇಒ ಅವರ ಗಮನಕ್ಕೆ ತಂದರು.

ಈ ವೇಳೆ ಕೃಷಿ ಇಲಾಖೆಯಿಂದ ನರೇಗಾ ಯೋಜನೆಯಡಿ ಭೂಮಿಯ ಫಲವತ್ತತೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಜೊತೆಗೆ ಕೂಡಲೇ ಕೆಲಸ ಪ್ರಾರಂಭಿಸಿಲು ಕೃಷಿ ಅಧಿಕಾರಿಗಳಿಗೆ ಸೂಚಿಸಿದರು.

ಕೃಷಿ ಇಲಾಖೆಯ ಉಪನಿರ್ದೇಶಕ ಸಹದೇವ, ತಾ.ಪಂ. ಪ್ರಭಾರ ಇಒ ಕೆ.ರಾಜಶೇಖರ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಸಂತೋಷ ಪಟ್ಟದಕಲ್, ಜಿ.ಪಂ. ಕಾರ್ಯನಿರ್ವಹಣಾಧಿಕಾರಿ ವಿಜಯಕುಮಾರ, ಕೃಷಿ ಅಧಿಕಾರಿ ನವೀನ ಸೇರಿದಂತೆ ಇತರರು ಇದ್ದರು.

## 'ಭ್ರೂಣ ಹತ್ಯೆ ತಡೆಗೆ ಕೈಜೋಡಿಸಿ'

ನರಗುಂದ, ಅ.7– 'ಹೆಣ್ಣು ಭ್ರೂಣ ಹತ್ಯೆ ನಿರಂತರ ನಡೆದ ಪರಿಣಾಮವೇ ಇಂದು ಪುರುಷರಿಗೆ ಕನ್ಯೆ ಸಿಗದಂತಾಗಿದೆ. ಭ್ರೂಣ ಹತ್ಯೆ ನಿಲ್ಲಬೇಕು. ಇದಕ್ಕೆ ಸರ್ವರೂ ಕೈ ಜೋಡಿಸಬೇಕು' ಎಂದು ಕೊಣ್ಣೂರಿನ ವಿರಕ್ತಮಠದ ಶಿವಕುಮಾರ ಶ್ರೀ ಹೇಳಿದರು.

ತಾಲ್ಲೂಕಿನ ಕಲ್ಲಾಪುರದಲ್ಲಿ ಕೊಣ್ಣೂರಿನ ಕೆಇಎಸ್ ಸಂಯುಕ್ತ ಪದವಿಪೂರ್ವ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಆಶ್ರಯದಲ್ಲಿ ಮಂಗಳವಾರನಡೆದ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿದರು.

'ಮನುಷ್ಯನ ವ್ಯಕ್ತಿತ್ವದಿಂದ ದೇಶದ ಗೌರವ ಹೆಚ್ಚಾಗುತ್ತದೆ. ಆ ವ್ಯಕ್ತಿತ್ವ ಎನ್‌ಎಸ್‌ಎಸ್ ಶಿಬಿರದಿಂದ ಸಿಗುತ್ತದೆ. ಇದರಿಂದ ಸ್ವಾರ್ಥರಹಿತ ದೇಶಾಭಿಮಾನವುಳ್ಳ ಮತ್ತು ಗ್ರಾಮ ಸುಧಾರಣೆ ಬಗ್ಗೆ ಕಾಳಜಿವುಳ್ಳ ವ್ಯಕ್ತಿಗಳು ತಯಾರಾಗುತ್ತಾರೆ. ಸಾಮರಸ್ಯದ ಅಭಿವೃದ್ಧಿ, ಸ್ವಚ್ಛತೆ ಹಾಗೂ ಬಯಲು ಬಹಿರ್ದೆಸೆ ಮುಕ್ತ ಗ್ರಾಮವೇ ನಿಜವಾದ ಗ್ರಾಮದ ಅಭಿವೃದ್ಧಿಯಾಗಿದೆ' ಎಂದರು.

ಎಪಿಎಮ್ಸಿ ಮಾಜಿ ಅಧ್ಯಕ್ಷ ಶಂಕರಗೌಡ ಯಲ್ಲಪ್ಪಗೌಡ್ರ, 'ಉತ್ತರ ಪ್ರದೇಶ ರಾಜ್ಯದ ಮಾದುಪಟ್ಟಿ ಗ್ರಾಮದಲ್ಲಿ 75 ಕುಟುಂಬಗಳಿದ್ದು, ಅದರಲ್ಲಿನ 40 ಕುಟುಂಬಗಳಲ್ಲಿ ಐಎಎಸ್ ಅಧಿಕಾರಿಗಳು ಹೊರಹೊಮ್ಮಿದ್ದಾರೆ. ಅದರಂತೆ ಈ ಶಿಬಿರದ ವಿದ್ಯಾರ್ಥಿಗಳು ಸಾಧನೆ



ಮಾಡಬೇಕು' ಎಂದು ಆಶಿಸಿದರು.

ಪತ್ರಕರ್ತರಾದ ಎಸ್.ಎಸ್. ಖಾನಪ್ಪಗೌಡ್ರ ಹಾಗೂ ರಮೇಶ ಮೋಟೆಯವರನ್ನು ಸನ್ಮಾನಿಸಲಾಯಿತು.

ನಿವೃತ್ತ ಪ್ರಾಚಾರ್ಯ ಎಸ್.ಕೆ. ಜೋಶಿ, ಶಾಂತಲಿಂಗಶ್ರೀ, ಪ್ರಕಾಶಗೌಡ ತಿರಕನಗೌಡ್ರ, ಯಲ್ಲಪ್ಪಗೌಡ ಶಿವಪುರ, ಪ್ರಾಚಾರ್ಯ, ಕೆ. ಎಂ. ಮಾಕಣ್ಣವರ ಮಾತನಾಡಿದರು. ಶಿವಾನಂದ ಸ್ವಾಮೀಜಿ, ಶಿರೋಳ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಹನುಮವ್ವ ಹಿರೇಮನಿ, ಎಸ್.ಟಿ. ಚೌಡರೆಡ್ಡಿ, ನಿಂಗಪ್ಪ ಸೋಮಾಪೂರ, ನೇತಾಜಿಗೌಡ ಕೆಂಪನಗೌಡ್ರ, ಮಂಜು ಗಾಡಿ, ಶೇಖರಗೌಡ ಸಾಲಿಗೌಡ್ರ, ಎಸ್.ಬಿ. ಯಲಿಗಾರ, ಪ್ರಕಾಶಗೌಡ ತಿರಕನಗೌಡ್ರ, ಎಸ್.ಬಿ. ಯಲ್ಲಪ್ಪಗೌಡ್ರ, ಹನುಮಂತ ಭೂಸಣ್ಣವರ, ಎಚ್. ಎಸ್. ಶಿವಪ್ಪಯ್ಯನಮಠ, ಎಂ.ಡಿ. ಚಲವಾದಿ, ಎಸ್.ಎಂ. ಚವ್ಹಾಣ, ಬಿ.ಎಫ್. ಕರಿಗಾರ ಇದ್ದರು.

# ಅಲ್ಪಸಂಖ್ಯಾತರ ಬೇಡಿಕೆಗೆ ಆದ್ಯತೆ: ಹುಕ್ಕೇರಿ

ಚಿಕ್ಕೋಡಿ, ಅ.7– 'ಚಿಕ್ಕೋಡಿ ಸದಲಗಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು, ಅಲ್ಪಸಂಖ್ಯಾತರ ಬೇಡಿಕೆಗಳನ್ನು ಆದ್ಯತೆ ಮೇರೆಗೆ ಈಡೇರಿಸಲಾಗುತ್ತಿದೆ. ಹಿರೇಕೋಡಿ ಗ್ರಾಮದ ಸರ್ಕಾರಿ ಹಿರಿಯ ಉರ್ದು ಪ್ರಾಥಮಿಕ ಶಾಲೆಯನ್ನು ಉನ್ನತೀಕರಿಸಿ ಪ್ರೌಢಶಾಲೆಯನ್ನಾಗಿ ಶೀಘ್ರದಲ್ಲಿಯೇ ಮಾಡಲಾಗುವುದು' ಎಂದು ಶಾಸಕ ಗಣೇಶ ಹುಕ್ಕೇರಿ ಭರವಸೆ ನೀಡಿದರು.

ತಾಲ್ಲೂಕಿನ ಹಿರೇಕೋಡಿ ಗ್ರಾಮದಲ್ಲಿ ಮುಸ್ಲಿಂ ಸಮುದಾಯದವರಿಗಾಗಿ 20 ಲಕ್ಷ ವೆಚ್ಚದ ಶಾದಿ ಮಹಲ್ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

'ಮುಸ್ಲಿಂ ಸಮುದಾಯದ ಜನರಿಗೆ ಶುಭ ಕಾರ್ಯಗಳನ್ನು ಮಾಡಲು ಅನುಕೂಲವಾಗಲಿ ಎಂಬ ಕಾರಣದಿಂದ ಶಾದಿಮಹಲ್ ನಿರ್ಮಾಣ ಮಾಡಲಾಗುತ್ತಿದೆ. ದೇಸಾಯಿ ಅವರ ತೋಟದ ಬಳಿ ಕಿರು ಸೇತುವೆ ನಿರ್ಮಾಣ ಮಾಡಲಾಗುವುದು' ಎಂದರು. ಮುಖಂಡ



ಶಾನೂರ ಜಮಾದಾರ ಮಾತನಾಡಿ, 'ಉರ್ದು ಶಾಲಾ ಆವರಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕದ ಅವಶ್ಯತೆ ಇದ್ದು, ಕೂಡಲೇ ಕ್ರಮ ಕೈಗೊಂಡು ಶಾಲಾ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕು' ಎಂದರು.

ಮುಖಂಡರಾದ ಸುರೇಶ ಚೌಗಲಾ, ಗ್ರಾಮ ಪಂಚಾಯಿತಿ ಅಧ್ಯಕ್ಷ ಸತೀಶ ದಾಮನ್ನವರ, ಉಪಾಧ್ಯಕ್ಷ ರಾಮದಾಸ ಬಂಡಗರ, ಬಾಬಾಸಾಬ ಗುಡಿಮನಿ, ನಿಜಾಮ ಪಟೇಲ, ಅನಿತಾ ಬನಗೆ, ಚಿಕ್ಕೋಡಿ ಪುರಸಭೆ ಸದಸ್ಯ ಅನಿಲ ಮಾನೆ, ದಾದಾ ಪಟೇಲ, ಬಾಬರ್ ಪಟೇಲ, ಅನ್ವರ್, ರಿಯಾಜ್ ಇದ್ದರು.

# ಬೆಳೆಗೆ ಉತ್ತಮ ಬೆಲೆ ದೊರೆಯಲಿ: ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಹೇಳಿಕೆ

ಮೂಡಲಗಿ, ಅ.7– 'ಕೃಷಿಯನ್ನು ಉತ್ತೇಜಿಸುವ ಯೋಜನೆಗಳನ್ನು ಜಾರಿಗೆ ತಂದು ಅವುಗಳ ಪ್ರಯೋಜನ ರೈತರಿಗೆ ತಲುಪುವಂತಾಗಬೇಕು' ಎಂದು ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಹೇಳಿದರು.

ಮೂಡಲಗಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಮೂಡಲಗಿ ನವರಾತ್ರಿ ಉತ್ಸವ ಸಮಿತಿಯ ಆತಿಥ್ಯದಲ್ಲಿ ಕೃಷಿ, ತೋಟಗಾರಿಕೆ ಇಲಾಖೆಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳು, ಕರ್ನಾಟಕ ಪ್ರದೇಶ ಕೃಷಿ ಸಮಾಜ, ಶಿವಬೋಧರಂಗ ಪಿಕೆಪಿಎಸ್ ಸಹಯೋಗದಲ್ಲಿ ಆಯೋಜಿಸಿದ 3 ದಿನಗಳ ಕೃಷಿ ಮೇಳವನ್ನು ಉದ್ಘಾಟಿಸಿ ಮಾತನಾಡಿದರು.

'ರೈತರು ಬೆಳೆದ ಬೆಳೆಗೆ ಉತ್ತಮ ಬೆಲೆ ದೊರೆತರೆ ಮಾತ್ರ ರೈತ ರೈತರ ಆತ್ಮಹತ್ಯೆಗಳು ನಿಲ್ಲುತ್ತವೆ. ಕೃಷಿಯಲ್ಲಿನ ಹೊಸ ಆವಿಷ್ಕಾರಗಳು, ಸರ್ಕಾರದ ಯೋಜನೆಗಳ ಬಗ್ಗೆ, ಸರ್ಕಾರದ ಸಬ್ಸಿಡಿಗಳ ಬಗ್ಗೆ ರೈತರು ತಿಳಿದುಕೊಳ್ಳಬೇಕು' ಎಂದರು.

ಯುವ ನಾಯಕ ಸರ್ವೋತ್ತಮ ಜಾರಕಿಹೊಳಿ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಉಪಕುಲಪತಿ, ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ಮಾತನಾಡಿದರು.

ಶಿವಾನಂದ ಶ್ರೀ, ಶಿವಲಿಂಗ ಮುರುಘರಾಜೇಂದ್ರ ಶ್ರೀ, ಶಂಕರಾರೂಢ ಶ್ರೀ, ಅಡವಿಸಿದ್ಧರಾಮ ಶ್ರೀ, ಸಾನ್ನಿಧ್ಯ ವಹಿಸಿದ್ದರು.

ಮೂಡಲಗಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ವೆಂಕಟೇಶ ಸೋನವಾಲಕರ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪುರಸಭೆ ಅಧ್ಯಕ್ಷೆ ಖುರ್ಷಾದ ನದಾಫ್, ನಾಗನೂರದ ಅಲಗೌಡ ಪಾಟೀಲ, ಎಸ್.ಆರ್. ಸೋನವಾಲಕರ, ಆರ್.ಪಿ. ಸೋನವಾಲಕರ, ಸದಾಶಿವ ತಲಬಟ್ಟಿ, ಪಶುಪಾಲನೆ ಇಲಾಖೆಯ ಸಹಾಯಕ ನಿರ್ದೇಶಕ ಮೋಹನ ಕಮತ, ತೋಟಗಾರಿಕೆ ಇಲಾಖೆಯ ಡಾ.ಎಂ.ಎಲ್. ಜನಮಟ್ಟಿ, ಸಹಾಯಕ ಕೃಷಿ ನಿರ್ದೇಶಕ ಎಂ.ಎಂ. ನದಾಫ್, ಲಯನ್ಸ್ ಅಧ್ಯಕ್ಷ ಸಂಜಯ ಮೋಕಾಶಿ ಇದ್ದರು.

ಮಳಿಗೆಗಳು: 150 ಕೃಷಿ ಸಂಬಂಧಿಸಿದ ಮಾರಾಟ ಮಳಿಗೆಗಳು ಮೇಳದಲ್ಲಿವೆ. ಕಿಲಾರಿ ರಾಸುಗಳ ಪ್ರದರ್ಶನ, ಶ್ವಾನ ಪ್ರದರ್ಶನ ಸೇರಿದಂತೆ ವೈವಿಧ್ಯಮಯವಾದ ಸ್ಪರ್ಧೆಗಳನ್ನು ಸಹ ಏರ್ಪಡಿಸಿರುವರು.

## ಕಳಸಾ ಬಂಡೂರಿ ಯೋಜನೆಗೆ ವಿರೋಧ

ಬೆಳಗಾವಿ, ಅ.7– 'ಕಳಸಾ ಬಂಡೂರಿ ನಾಲಾ ಯೋಜನೆ ಅನುಷ್ಠಾನ ಪರಿಸರಕ್ಕೆ ಮಾರಕವಾಗಲಿದೆ. ಇದರ ಬಗ್ಗೆ ಮಹದಾಯಿ ಜಲವಿವಾದ ನ್ಯಾಯಾಧೀಕರಣ ನೀಡಿದ ತೀರ್ಪು ಕೂಡ ಅವೈಜ್ಞಾನಿಕವಾಗಿದೆ' ಎಂದು ವಿವಿಧ ಪರಿಸರ ಸಂಘಟನೆಗಳ ಕಾರ್ಯಕರ್ತರು ಆರೋಪಿಸಿದ್ದಾರೆ.

ಪರ್ಯಾವರಣ, ಪರಿಸರಕ್ಕಾಗಿ ನಾವು, ಪರಿವರ್ತನಾ, ಗ್ರಾಕೂಸ್ ಹಾಗೂ ಜಾಗೃತಿ ಮಹಿಳಾ ಒಕ್ಕೂಟದ ಪದಾಧಿಕಾರಿಗಳು ನಗರದಲ್ಲಿ , ಈ ಯೋಜನೆಗೆ ಒಕ್ಕೊರಲಿನಿಂದ ವಿರೋಧ ವ್ಯಕ್ತಪಡಿಸಿ ಜಂಟಿ ಹೇಳಿಕೆ ನೀಡಿದರು.

ನಿತಿನ್ ಧೋಂಡ ಮಾತನಾಡಿ, 'ನ್ಯಾಯಾಧೀಕರಣದ ತೀರ್ಪಿನ ಪ್ರಕಾರ, ಕುಡಿಯುವ ನೀರಿನ ಅಗತ್ಯತೆ ಪೂರೈಸಲು ಮಲಪ್ರಭಾ ನದಿಗೆ ಸುಮಾರು 3.94 ಟಿಎಂಸಿ ಅಡಿ ನೀರನ್ನು ತಿರುಗಿಸಲಾಗುವುದು. ಆದರೆ, ಈ ಯೋಜನೆ ಕಳಸಾ ಬಂಡೂರಿ ನಾಲೆ ಮತ್ತು ಮಹದಾಯಿ ನದಿಯ ನೀರು ಕೆಳಭಾಗಕ್ಕೆ ಹರಿಯುವುದನ್ನು ತಡೆಯುತ್ತದೆ. ಅಣೆಕಟ್ಟು, ಕಾಲುವೆಗಳ ನಿರ್ಮಾಣದಿಂದ ಅರಣ್ಯಕ್ಕೆ ಹಾನಿಯಾಗಲಿದೆ. 2 ಲಕ್ಷಕ್ಕೂ ಹೆಚ್ಚು ಮರ ಕಡಿಯಲಿದ್ದು, ಹುಲಿ ಕಾರಿಡಾರ್ ಸೇರಿದಂತೆ ಅಭಯಾರಣ್ಯಗಳಿಗೆ ತೊಂದರೆಯಾಗಲಿದೆ' ಎಂದರು. 'ಮಲಪ್ರಭಾ ನದಿಪಾತ್ರದಲ್ಲಿರುವ ಮತ್ತು ಹುಬ್ಬಳ್ಳಿ ಧಾರವಾಡದ ಜನರ ಕುಡಿಯುವ ನೀರಿನ ಅವಶ್ಯಕತೆ ಈಡೇರಿಸುವುದಾಗಿ ಎಲ್ಲ ರಾಜಕೀಯ ಪಕ್ಷಗಳು ಭರವಸೆ ನೀಡಿದ್ದು, ಈ ಯೋಜನೆಯ ಹಿಂದೆ ರಾಜಕೀಯ ಕಾರಣ ಅಡಗಿದೆ' ಎಂದು ಅವರು ಹೇಳಿದರು. 'ನ್ಯಾಯಾಧೀಕರಣದ ವಿಚಾರಣೆ ವೇಳೆ, ನಾವು ನಮ್ಮ ಅಭಿಪ್ರಾಯ ತಿಳಿಸಲು ಪ್ರಯತ್ನಿಸಿದರೂ ಅವರು ಕೇಳಲಿಲ್ಲ. ಈ ಯೋಜನೆ ಅನುಷ್ಠಾನಗೊಂಡರೆ ಉತ್ತರ ಕರ್ನಾಟಕಕ್ಕೆ ಮಳೆಯ ಮೂಲವಾಗಿರುವ ಪಶ್ಚಿಮಘಟ್ಟ ಪ್ರದೇಶ ವಿನಾಶವಾಗಲಿದೆ' ಎಂದರು.

ಪರಿಸರವಾದಿಗಳಾದ ದಿಲೀಪ ಕಾಮತ್, ಶಾರದಾ ಗೋಪಾಲ, ನೈಲಾ ಕೊಹೆಲೊ, ಶಿವಾಜಿ ಕಾಗಣಿಕರ ಇತರರಿದ್ದರು.

# ವಿಧಿವಿಜ್ಞಾನ ವಿ.ವಿಗೆ 41 ಎಕರೆ : 120 ಕೋಟಿ ಮೊತ್ತದ ಯೋಜನೆ

ಧಾರವಾಡ, ಅ.7– 'ಕೃಷಿ ವಿಶ್ವವಿದ್ಯಾಲಯದ 41 ಎಕರೆ ಜಾಗವನ್ನು ರಾಷ್ಟ್ರೀಯ ವಿಧಿವಿಜ್ಞಾನ (ಫೊರೆನ್ಸಿಕ್) ವಿಶ್ವ ವಿದ್ಯಾಲಯಕ್ಕೆ ಒದಗಿಸಲಾಗಿದೆ. ಕಟ್ಟಡ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡಬೇಕು' ಎಂದು ಗೃಹ ಸಚಿವ ಜಿ. ಪರಮೇಶ್ವರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಟ್ಟಡ ನಿರ್ಮಾಣ ಗುತ್ತಿಗೆಯನ್ನು ಸಿಪಿಡಬ್ಲುಡಿಗೆ ನೀಡಿದ್ದಾರೆ. 120 ಕೋಟಿ ಮೊತ್ತದ ಯೋಜನೆಯ ನೀಲನಕ್ಷೆ ಸಿದ್ಧಪಡಿಸಿದ್ದಾರೆ. ಕೇಂದ್ರ ಸರ್ಕಾರವು ಅಹಮದಾಬಾದ್‌ನಲ್ಲಿ ಸೈಬರ್ ವಿಶ್ವವಿದ್ಯಾಲಯ ಸ್ಥಾಪಿಸಿದ್ದು, ಅದರ ಭಾಗವಾಗಿ ಧಾರವಾಡದಲ್ಲಿ ವಿಶ್ವವಿದ್ಯಾಲಯ ಆರಂಭಿಸಿದೆ. 'ಡಿಜಿಟಲ್', 'ಫಾರ್ಮಾಸಿಟಿಕಲ್', 'ಕೆಮಿಕಲ್' ಮೊದಲಾದ ಘಟಕಗಳು ಇಲ್ಲಿವೆ' ಎಂದು ತಿಳಿಸಿದರು.

'ಸೈಬರ್ ಅಪರಾಧಗಳನ್ನು ಕಾನೂನಿನ ಚೌಕಟ್ಟಿಗೆ ಒಳಪಡಿಸಲು ಮತ್ತು ಅವುಗಳ ತನಿಖೆಗೆ ಆಧುನಿಕ ವಿಧಾನ ಅಗತ್ಯವಿದೆ. ಸಿಇಎನ್ (ಸೈಬರ್, ಎಕನಾಮಿಕ್ ಆಯಂಡ್ ನಾರ್ಕೊಟಿಕ್ಸ್) ಅಪರಾಧಗಳ ಪತ್ತೆ ನಿಟ್ಟಿನಲ್ಲಿ ಪ್ರತಿ ಜಿಲ್ಲೆಯಲ್ಲೂ ಪ್ರಾಥಮಿಕ ವಿಧಿವಿಜ್ಞಾನ ಪ್ರಯೋಗಾಲಯ ಸ್ಥಾಪಿಸಲಾಗಿದೆ' ಎಂದರು.

'ಮಾದಕ ಪದಾರ್ಥಗಳ ತಡೆಗೆ ಕ್ರಮ ವಹಿಸಲಾಗಿದ್ದು, ಕಳೆದ ವರ್ಷ ಸುಮಾರು 250 ಕೋಟಿ ಮೌಲ್ಯದ ಮಾದಕ ಪದಾರ್ಥ



ನಾಶಪಡಿಸಲಾಗಿದೆ. ವಿದೇಶಗಳಿಂದ ಬರುವವರ ಮೇಲೂ ನಿಗಾ ಇಡಲಾಗಿದೆ. ಇದೇ ವಿಚಾರಕ್ಕೆ ಒಂದೂವರೆ ವರ್ಷದಲ್ಲಿ 100ಕ್ಕೂ ಹೆಚ್ಚು ವಿದೇಶಿಗರನ್ನು ವಾಪಸ್ ಕಳಿಸಲಾಗಿದೆ' ಎಂದು ಪ್ರತಿಕ್ರಿಯಿಸಿದರು.

'ಎಫ್‌ಐಆರ್ ಆಗಿದ್ದಕ್ಕೆ ರಾಜೀನಾಮೆ ನೀಡಬೇಕು ಎನ್ನುವುದಾದರೆ ಅಂತಹವರ ಪಟ್ಟಿ ಸಿದ್ಧಪಡಿಸಿ ರಾಜೀನಾಮೆ ಕೇಳಬೇಕು ಎಂದು ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ವಾಸ್ತವಾಂಶ ಮಾತನಾಡಿದ್ದಾರೆ. ಕಾಂಗ್ರೆಸ್ ಸೇರುವುದು, ಸೇರದಿರುವುದು ಅವರಿಷ್ಟ' ಎಂದು ಉತ್ತರಿಸಿದರು.

'ಇಲ್ಲಿನ ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯದವರು ಪೊಲೀಸರಿಗೆ ವಿಶೇಷ ತರಬೇತಿ ಕಾರ್ಯಕ್ರಮ ರೂಪಿಸಿದ್ದಾರೆ. ಇದರಿಂದ, ಸಿಇಎನ್ ಅಪರಾಧ ಪ್ರಕರಣಗಳ ತನಿಖೆಗೆ ಪೊಲೀಸರಿಗೆ ಅನುಕೂಲವಾಗಲಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ್ ತಿಳಿಸಿದರು.

'ಕಾನ್‌ಸ್ಟೆಬಲ್ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಪ್ರತ್ಯೇಕ ತರಬೇತಿ ಕಾರ್ಯಕ್ರಮ ವಿನ್ಯಾಸಗೊಳಿಸಿದ್ದಾರೆ. ಸೈಬರ್ ಅಪರಾಧ ಪ್ರಕರಣಗಳು ಹೆಚ್ಚುತ್ತಿದ್ದು, ರಾಜ್ಯದಲ್ಲಿ 43 ಕಡೆ ಸಿಇಎನ್ ಅಪರಾಧ ಠಾಣೆಗಳನ್ನು ಸ್ಥಾಪಿಸಲಾಗಿದೆ. ಮುಂದಿನ ದಿನಗಳಲ್ಲಿ ಸಿಇಎನ್ ವಿಭಾಗಕ್ಕೆ ಪ್ರತ್ಯೇಕವಾಗಿ ಎಸ್‌ಪಿ ಅಥವಾ ಹಿರಿಯ ಅಧಿಕಾರಿ ಹುದ್ದೆ ಸೃಷ್ಟಿಸಬಹುದು' ಎಂದು ತಿಳಿಸಿದರು.

'545 ಪಿಎಸ್‌ಐ ಹುದ್ದೆಗಳ ನೇಮಕಾತಿ ವಿಚಾರ ಹೈಕೋರ್ಟ್‌ನಲ್ಲಿದೆ. 371(ಜೆ) ಕಾಯ್ದೆ ಅನ್ವಯಿಸಬೇಕೆಂದು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಕಾಯ್ದೆಯಂತೆ ಶೇ 8ರಷ್ಟು ಮೀಸಲಾತಿ ನೀಡಬೇಕೆಂದು ಪ್ರಿಯಾಂಕ್ ಖರ್ಗೆ, ಶರಣಪ್ರಕಾಶ ಪಾಟೀಲ, ಈಶ್ವರ ಖಂಡ್ರೆ ಅವರೂ ಒತ್ತಾಯಿಸಿದ್ದಾರೆ. ನೇಮಕಾತಿ ಅಧಿಸೂಚನೆಯನ್ನು 2020ರಲ್ಲಿ ಪ್ರಕಟಿಸಲಾಗಿದ್ದು, ನ್ಯಾಯಾಲಯ ತೀರ್ಪು

# 'ಬಡವರ ಆರ್ಥಿಕ ಪ್ರಗತಿಗಾಗಿ ಗ್ಯಾರಂಟಿ'

ಹುಬ್ಬಳ್ಳಿ, ಅ.7– 'ರಾಜ್ಯದ ಬಡವರನ್ನು ಬಡತನ ರೇಖೆಗಿಂತ ಮೇಲಕ್ಕೆ ತರಬೇಕೆಂಬ ಉದ್ದೇಶದಿಂದ 'ಗ್ಯಾರಂಟಿ' ಯೋಜನೆಗಳನ್ನು ನಮ್ಮ ಸರ್ಕಾರ ಅನುಷ್ಠಾನ ಮಾಡಿದೆ. ಈ ಬಗ್ಗೆ ಟೀಕೆ ಮಾಡುವ ಬಿಜೆಪಿ ಹಾಗೂ ಜೆಡಿಎಸ್ ನಾಯಕರು, ತಮ್ಮ ಪಕ್ಷದ ಕಾರ್ಯಕರ್ತರಿಗೆ ಈ ಸೌಲಭ್ಯ ಪಡೆಯಬೇಡಿ ಎಂಬ ಕರೆ ನೀಡಲಿ' ಎಂದು ಗೃಹ ಸಚಿವ ಜಿ. ಪರಮೇಶ್ವರ್ ಸವಾಲು ಹಾಕಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ತಿಂಗಳು 2 ಸಾವಿರವನ್ನು ಬಿಜೆಪಿ, ಜೆಡಿಎಸ್ ಕಾರ್ಯಕರ್ತೆಯರೂ ಪಡೆದುಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಸದಸ್ಯತ್ವ ಪಡೆದವರಿಗಾಗಿ ಮಾತ್ರ ನಾವು ಗ್ಯಾರಂಟಿ ಯೋಜನೆಗಳನ್ನು ರೂಪಿಸಿಲ್ಲ' ಎಂದರು.



'ಹಣಕಾಸಿನ ಲೆಕ್ಕಾಚಾರ ಹಾಕಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ರಾಜ್ಯದ ಹಣಕಾಸು ನಿರ್ವಹಣೆಯಲ್ಲಿ ಸ್ವಲ್ಪ ಕಷ್ಟವಾಗುತ್ತದೆ ನಿಜ, ಆದರೂ ನಿಭಾಯಿಸುತ್ತೇವೆ. 15 ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಣಕಾಸು ನಿರ್ವಹಣೆ ಗೊತ್ತಿದೆ' ಎಂದು ಹೇಳಿದರು.

'ಈ ಹಿಂದೆ ರಾಜ್ಯದ ಹಣಕಾಸು ಸ್ಥಿತಿಯನ್ನು ಬಿಜೆಪಿಯವರು ಹಾಳು ಮಾಡಿದ್ದರು. ಅಧಿಕಾರದಲ್ಲಿದ್ದಾಗ ಲೋಕೋಪಯೋಗಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ನೀರಾವರಿ ಇಲಾಖೆಯ ಕಾಮಗಾರಿಗಳ ದೊಡ್ಡ ಮೊತ್ತದ ಬಿಲ್‌ಗಳನ್ನು ಪಾವತಿಸಿರಲಿಲ್ಲ. ಈಗ ನಾವು ಪಾವತಿಸುತ್ತಿದ್ದೇವೆ' ಎಂದರು.

'ನಿಗಮ, ಮಂಡಳಿಗಳಿಗೆ ಶೀಘ್ರದಲ್ಲೇ 1,800 ಸದಸ್ಯರನ್ನು ನೇಮಕ ಮಾಡಲು ಸರ್ಕಾರ ನಿರ್ಧರಿಸಿದೆ' ಎಂದು ಹೇಳಿದರು.

ಶಾಸಕ ಎನ್.ಎಚ್.ಕೋನರಡ್ಡಿ, ಎಂ.ಎಸ್.ಅಕ್ಕಿ, ಸದಾನಂದ ಡಂಗನವರ, ಅಲ್ತಾಫ್ ಕಿತ್ತೂರ, ಐ.ಜಿ.ಸನದಿ, ಅಲ್ತಾಫ್ ಹಳ್ಳೂರು, ಅನಿಲಕುಮಾರ ಪಾಟೀಲ, ಅನ್ವರ್ ಮುಧೋಳ, ಮೋಹನ ಹಿರೇಮನಿ, ರಾಜಶೇಖರ ಮೆಣಸಿನಕಾಯಿ, ರಾಜಶೇಖರ ಕಮತಿ ವಸಂತ ಲದ್ವಾ ಹಾಜರಿದ್ದರು.

# ಕ್ರೀಡೆ: ಪಿ.ಸಿ ಜಾಬಿನ್ ಕಾಲೇಜು ಸಾಧನೆ



ಹುಬ್ಬಳ್ಳಿ, ಅ.7– ನಗರದ ಪಿ.ಸಿ. ಜಾಬಿನ್ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯದ ವಿದ್ಯಾರ್ಥಿಗಳು ವಿವಿಧ ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇಲಾಖೆ ಮತ್ತು ಪ್ರೆಸೆಂಟೇಷನ್ ಬಾಲಕಿಯರ ಪದವಿಪೂರ್ವ ಕಾಲೇಜು ವತಿಯಿಂದ ಈಚೆಗೆ ನಡೆದ ಜಿಲ್ಲಾಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಆದಿತ್ಯಾ ಚಿಲ್ಲೂರ ಪ್ರಥಮ ಸ್ಥಾನ ಗಳಿಸಿ, ರಾಜ್ಯಮಟ್ಟಕ್ಕೆ ಆಯ್ಕೆಯಾಗಿದದು, ಸಿಂಚನಾ ಕಲಘಟಗಿ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ಬೆಳಗಾವಿಯಲ್ಲಿ ನಡೆದ ದಸರಾ ವಿಭಾಗಮಟ್ಟದ ಈಜು ಸ್ಪರ್ಧೆಯಲ್ಲಿ ಸಾಕ್ಷಿ ಶಿರಳ್ಳಿ 4 ಚಿನ್ನದ ಪದಕ ಮತ್ತು 2 ಬೆಳ್ಳಿಯ ಪದಕ ಪಡೆದು ರಾಜ್ಯಮಟ್ಟದ ಮೈಸೂರು ದಸರಾ ಮುಖ್ಯಮಂತ್ರಿ ಟ್ರೋಫಿ ಟೂರ್ನಿಗೆ ಆಯ್ಕೆಯಾಗಿದ್ದಾರೆ.

ಹರ್ಷರಾಜ ಕೋಟಿ ಜಿಲ್ಲಾಮಟ್ಟದ ದಸರಾ ಈಜು ಸ್ಪರ್ಧೆಯಲ್ಲಿ 3 ಚಿನ್ನದ ಪದಕ, 1 ಬೆಳ್ಳಿ ಪದಕ ಮತ್ತು ವಿಭಾಗ ಮಟ್ಟದ ಕ್ರೀಡಾಕೂಟದಲ್ಲಿ 1 ಬೆಳ್ಳಿಯ ಪದಕ ಹಾಗೂ 2 ಕಂಚಿನ ಪದಕವನ್ನು ಪಡೆದಿದ್ದಾರೆ.

ತಾಲ್ಲೂಕುಮಟ್ಟದ ಚೆಸ್ ಟೂರ್ನಿಯಲ್ಲಿ ಸುಮಿತ ಮೆರ್ವಾಡೆ ಪ್ರಥಮ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದು, ಸಿಂಚನಾ ಗೋಕಾಕ ದ್ವಿತೀಯ, ವೇದಾಂತ ಕಡ್ಲಾಸ್ಕರ, ಅಮೃತಾ ಕೊಟ್ಟನ್ನವರ ತೃತೀಯ ಸ್ಥಾನ ಪಡೆದಿದ್ದಾರೆ.

ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಬಿ. ಕೋರೆ, ಆಡಳಿತ ಮಂಡಳಿಯ ನಿರ್ದೇಶಕ ಶಂಕರಣ್ಣ ಮುನವಳ್ಳಿ, ಪದವಿ ಕಾಲೇಜಿನ ಪ್ರಾಚಾರ್ಯ ಎಲ್. ಡಿ. ಹೊರಕೇರಿ, ಪ್ರಾಚಾರ್ಯ ವಿ.ಆರ್. ವಾಘ್ಮೊಡೆ ಅಭಿನಂದಿಸಿದ್ದಾರೆ.

# ಪ್ರವಾಸಿ ತಾಣ ರಕ್ಷಣೆಗೆ ಸಲಹೆ: ಮನೀಷಾ ಪಾಂಡೆ



ಧಾರವಾಡ, ಅ.7– 'ಪ್ರವಾಸಿ ತಾಣಗಳನ್ನು ರಕ್ಷಿಸಲು ಯುವಜನರು ಮುಂದಾಗ ಬೇಕು' ಎಂದು ಉತ್ತರಾಖಂಡದ ಇಂಟರ್ ನ್ಯಾಷನಲ್ ಸೆಂಟರ್ ಫಾರ್ ರೆಸ್ಪಾನ್ಸಿಬಲ್ ಟೂರಿಸಂ ಫೌಂಡೇಷನ್ ನಿರ್ದೇಶಕಿ ಮನೀಷಾ ಪಾಂಡೆ ಹೇಳಿದರು.

ಪ್ರವಾಸೋದ್ಯಮ ದಿನದ ಅಂಗವಾಗಿ ಕರ್ನಾಟಕ ಕಲಾ ಕಾಲೇಜಿನ ಸ್ನಾತಕ ಮತ್ತು ಸ್ನಾತಕೋತ್ತರ ಪ್ರವಾಸೋದ್ಯಮ ಅಧ್ಯಯನ ವಿಭಾಗ ಮತ್ತು ಕೇಂದ್ರ ಪ್ರವಾಸೋದ್ಯಮ ಕಚೇರಿ ವತಿಯಿಂದ ವಿಭಾಗದ ವಿಜಯ ಭುವನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರನ್ನು ಗೌರವಿಸಬೇಕು. ಸಾಂಪ್ರದಾಯಕ ತಿನಿಸು, ಸಂಸ್ಕೃತಿಯತ್ತ ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ಸರ್ಕಾರವು ಪ್ರವಾಸೋದ್ಯಮ ಅಭಿವೃದ್ಧಿಗೆ ಯೋಜನೆ ರೂಪಿಸಬೇಕು' ಎಂದರು.

ಪ್ರೊ.ಎಸ್.ರಾಜಶೇಖರ, ಶಿರಸಿ ಕಮ್ಯುನಿಟಿ ಟೂರಿಸಂನ ಸೀತಾರಾಮ ಹೆಗಡೆ, ಪ್ರಾಚಾರ್ಯ ಡಿ.ಬಿ.ಕರಡೋಣಿ ಪ್ರವಾಸೋದ್ಯಮ ವಿಭಾಗದ ಮುಖ್ಯಸ್ಥ ಜಗದೀಶ ಕಿವುಡನವರ, ರಾಣಿ ರವಿಶಂಕರ, ಸುಷ್ಮಾ ಮಳಗಿ, ಸಂದೀಪ್ ಘೋರ್ಪಡೆ ಪಾಲ್ಗೊಂಡಿದ್ದರು.

## ಕಿತ್ತೂರಿಗೆ ಬೈರೇಗೌಡ 8ರಂದು

ಚನ್ನಮ್ಮನ ಕಿತ್ತೂರು, ಅ.7– 'ಇಲ್ಲಿಯ ಕೋಟೆ ಆವರಣಕ್ಕೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅ. 8ಕ್ಕೆ ಭೇಟಿ ನೀಡಿ,



ಮಹತ್ವಾಕಾಂಕ್ಷೆಯ ಯೋಜನೆ ಆಗಿರುವ 'ಥೀಮ್ ಪಾರ್ಕ್' ಸೇರಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ' ಎಂದು ಶಾಸಕ ಬಾಬಾಸಾಹೇಬ ಪಾಟೀಲ ತಿಳಿಸಿದರು.

ಕೋಟೆ ಆವರಣದೊಳಗೆ ನಡೆದಿರುವ ಸ್ವಚ್ಛತೆ ಮತ್ತು ಇತರ ಸಿದ್ಧತಾ ಕಾರ್ಯ ವೀಕ್ಷಣೆಗೆ ಅಧಿಕಾರಿಗಳ ಜತೆ ಆಗಮಿಸಿದ್ದ ಅವರು ಪತ್ರಕರ್ತರೊಂದಿಗೆ ಮಾತನಾಡಿದರು.

ಅ. 23 ರಿಂದ 25 ರವರೆಗೆ ನಡೆಯಲಿರುವ 'ಚನ್ನಮ್ಮನ ಕಿತ್ತೂರು ಉತ್ಸವ' ಆಚರಣೆಯಲ್ಲಿ ಭಾಗವಹಿಸಲಿರುವ ಗಣ್ಯ ವ್ಯಕ್ತಿಗಳು ಮತ್ತು ಕಲಾವಿದರಿಗೆ ಉಳಿದುಕೊಳ್ಳುವ ವ್ಯವಸ್ಥೆಯ ಬಗ್ಗೆಯೂ ಉಪವಿಭಾಗಾಧಿಕಾರಿ ಪ್ರಭಾವತಿ ಫಕ್ಕೀರಪುರ ಜತೆ ಚರ್ಚೆ ನಡೆಸಿದರು.

ತಹಶೀಲ್ದಾರ್ ರವೀಂದ್ರ ಹಾದಿಮನಿ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಘೋರ್ಪಡೆ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಲ್ಲಯ್ಯ ಹಿರೇಮಠ, ಲೋಕೋಪಯೋಗಿ ಇಲಾಖೆ ಎಇಇ ಸಂಜೀವ ಮಿರಜಕರ, ಪ್ರಾಚ್ಯವಸ್ತು ಇಲಾಖೆ ಎಇಇ ಶ್ರೀಕಂಡೆ, ರಾಘವೇಂದ್ರ, ಪ್ರೊ. ಎನ್. ಎಸ್. ಗಲಗಲಿ ಇದ್ದರು.

# ಚನ್ನಮ್ಮ ವೃತ್ತದಲ್ಲಿ ಚಿಮ್ಮಿದ ಕಾರಂಜಿ!

ಹುಬ್ಬಳ್ಳಿ, ಅ.7– ಇಲ್ಲಿನ ಚನ್ನಮ್ಮ ವೃತ್ತದ ಬಳಿ ಭೂಗತವಾಗಿ ಅಳವಡಿಸಿದ್ದ ಕುಡಿಯುವ ನೀರಿನ ಪೈಪ್‌ಲೈನ್‌ಗೆ ಶನಿವಾರ ಸಂಜೆ ಮೇಲ್ಸೇತುವೆ ಕಾಮಗಾರಿ ನಡೆಯುವ ವೇಳೆ ಜೆಸಿಬಿ ತಾಗಿದ ಪರಿಣಾಮ, ಪೈಪ್‌ಲೈನ್ ಒಡೆದು ವೃತ್ತದ ಸುತ್ತಲಿನ ವಾತಾವರಣವೆಲ್ಲ ಜಲಾವೃತವಾಗಿತ್ತು. ಅಕ್ಕಪಕ್ಕದ ಅಂಗಡಿಗಳಿಗೂ ನೀರು ನುಗ್ಗಿತ್ತು. ಸಂಜೆ 6ರ ವೇಳೆ ಏಕಾಏಕಿ ಪೈಪ್‌ಲೈನ್ ಒಡೆದು ಸುಮಾರು 25 ಮೀಟರ್ ಎತ್ತರದವರೆಗೆ ನೀರು ಚಿಮ್ಮಿತ್ತು. ಚನ್ನಮ್ಮ ವೃತ್ತ ಸೇರಿದಂತೆ ಸುತ್ತಲಿನ ಅಂಗಡಿ, ವಸತಿ ಗೃಹಗಳಿಗೂ ನೀರು ನುಗ್ಗಿತ್ತು. ಸುಮಾರು ಅರ್ಧಗಂಟೆ ನೀರಿನ ಹರಿವು ನಿರಂತರವಾಗಿದ್ದು, ಲಕ್ಷಗಟ್ಟಲೇ ನೀರು ಪೋಲಾಗಿದೆ. ಬಸವ ವನದವರೆಗೂ ನೀರು ಯಥೇಚ್ಛವಾಗಿ ಹರಿದಿದೆ.

'ಕುಡಿಯುವ ನೀರು ಪೂರೈಕೆಯ ಪ್ರಮುಖ ಪೈಪ್‌ಲೈನ್ ಅದಾಗಿದ್ದು, ಕಾಮಗಾರಿ ನಡೆಯುವಾಗ ಜೆಸಿಬಿ ತಾಗಿ ಪೈಪ್ ಒಡೆದಿತ್ತು. ಎಲ್




ಆಯಂಡ್ ಟಿ ಸಿಬ್ಬಂದಿ ತಡರಾತ್ರಿವರೆಗೂ ಇದ್ದು ಸರಿಪಡಿಸಿದ್ದಾರೆ' ಎಂದು ಪಾಲಿಕೆ ಆಯುಕ್ತ ಈಶ್ವರ ಉಳ್ಳಾಗಡ್ಡಿ ಹೇಳಿದರು.

"SUVARN JANANI" Kannada Daily Editor, Printer, Publisher & Owned by Shri. PRAVEEN BHAIRAGOUDA PATIL At : # No. 503/11, Patil Galli Kanabargi, Belagavi-590016, Printed At: at M/s. Laxmi Printers, No. 627, Auto Nagar, Belagavi - 590016. Belagavi, Karnataka State. e-mail suvarnjananinews2022@gmail.com M: 9742347569